8. ಅರ್ಧ ಗಂಟೆ ಕಾಲಾವಧಿ ಚರ್ಚೆ

1. ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸುವ್ಯವಸ್ಥಿತ ಶಾಶ್ವತ ಕಸ ವಿಲೇವಾರಿ ಬಗ್ಗೆ.

ಶ್ರೀ ಎನ್.ಎ ಹ್ಯಾರಿಸ್ (ಶಾಂತಿನಗರ):– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತುಂಬಾ ಧನ್ಯವಾದಗಳು. ಇವತ್ತು ತ್ಯಾಜ್ಯ ವಿಲೇವಾರಿ ವಿಷಯವನ್ನು ಕಳೆದ ಮೂರು ದಿವಸಗಳಿಂದ ಮುಂದಕ್ಕೆ ಹಾಕಿ, ಇವತ್ತು ನಮಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಿಜವಾಗಿಯೂ ಬೆಂಗಳೂರು ನಗರದಲ್ಲಿ ವಾಸ ಮಾಡುವ ಜನರಿಗೆ ಕಸದ ಸಮಸ್ಯೆ ಒಂದು ದೊಡ್ಡ ಸಮಸ್ಯೆ ಆಗಿದೆ. ಈ ಕಸದಿಂದ ಬಹುಶಃ ನಗರದಲ್ಲಿರುವಂಥ ಜನರ ಆರೋಗ್ಯದ ಮೇಲೂ ಪರಿಣಾಮ ಬೀರುವಂಥ ಕಷ್ಟವಾಗುವಂಥ ಪರಿಸ್ಥಿತಿ ಕೂಡ ಇವತ್ತು ನಮ್ಮ ಮುಂದೆ ಬಂದಿದೆ. ಇವತ್ತು ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಕಸ ಎನ್ನುವ ಮಟ್ಟಕ್ಕೆ ಬಂದಿದೆ. ನಮ್ಮ ಬಿ.ಬಿ.ಎಂ.ಪಿ. ಇರಬಹುದು, ನಮ್ಮ ರಾಜ್ಯ ಸರ್ಕಾರವಿರಬಹುದು, ಈ ವಿಷಯವಾಗಿ ಬಹಳಷ್ಟು ಪ್ರಯತ್ನವನ್ನು ಮಾಡಿದರೂ ಕೂಡ ಈ ಒಂದು garbage issueವನ್ನು ಸರಿಯಾದಂಥ ರೀತಿಯಲ್ಲಿ ಮುಗಿಸಲು ಆಗುತ್ತಿಲ್ಲ. ಇಲ್ಲಿ ಏನಾಗಿದೆಯೆಂದರೆ, ಕಸ production ಆಗುವಂಥ ಜಾಗದಲ್ಲೇ ಕಡಿಮೆ ಮಾಡುವಂಥ ಕೆಲಸ ಮೊದಲು ಆಗಬೇಕಾಗಿದೆ. ಆದರೆ ಕಸ ಉತ್ಪತ್ತಿ ಜಾಸ್ತಿಯಾಗುತ್ತಿದೆ, ಮತ್ತೆ ಅದನ್ನು ತೆಗೆದುಕೊಂಡು ಹೋಗುವ ಕೆಲಸವೂ ಸಹ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ನಾವು ನಿಜವಾಗಿಯೂ ನಗರದಲ್ಲಿ ಆಗುವಂಥ ಕಸವನ್ನು ಹಳ್ಳಿಕಡೆಗೆ ತೆಗೆದುಕೊಂಡು ಹೋಗಿ dump ಮಾಡುವಂಥದ್ದು ಸರಿಯಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ, ಇಲ್ಲಿರುವಂಥ ಕಸವನ್ನು ಅಲ್ಲಿ ತೆಗದುಕೊಂಡು ಹೋಗಿ ಹಾಕಿದರೆ, ಮತ್ತೆ ಅಲ್ಲಿರುವಂಥ ನಮ್ಮ ಸಹೋದರರಿಗೆ ಸಮಸ್ಯೆಯಾಗುತ್ತದೆ. ಆ ರೀತಿ ಕಸ ಹಾಕುವುದು ಕಡಿಮೆಯಾಗಬೇಕು. ಈ ಸಮಸ್ಯೆ ಬೆಂಗಳೂರಿನಲ್ಲಿ ಮಾತ್ರ ಇರುವಂಥದ್ದು ಅಲ್ಲ. ಇಡೀ ಪ್ರಪಂಚದಲ್ಲಿ ಎಲ್ಲಾ ನಗರಗಳಲ್ಲೂ, ಎಲ್ಲಾ ಕಡೆಗಳಲ್ಲಿ ಜನರು ವಾಸ ಮಾಡುವ ಕಡೆಗಳಲ್ಲಿ ಕಸ ಇದ್ದೇ ಇರುತ್ತದೆ. ಆದರೆ ನಾವು ಇದನ್ನು

ಸರಿಯಾದಂಥ ರೀತಿಯಲ್ಲಿ ಯಾವ ತರಹ ಉಪಯೋಗಿಸಿ ಅದರಿಂದಲೂ ಪ್ರಯೋಜನವಾಗುವಂಥದ್ದನ್ನು ಮಾಡಬಹುದು. ಅದು energy ಇರಬಹುದು, ಇನ್ನೊಂದು ಇರಬಹುದು, ಬೇರೆ ಬೇರೆ ರೀತಿಯಲ್ಲಿ ಉಪಯೋಗವಾಗುವಂಥ ಕೆಲಸವಾಗಬೇಕಾಗಿದೆ. ಮೊದಲನೆಯದಾಗಿ, ನಾವು ಕರ್ನಾಟಕ ರಾಜ್ಯದಲ್ಲಿ ಪ್ಲಾಸ್ಟಿಕ್ ಉಪಯೋಗ ಮಾಡುವಂಥದ್ದನ್ನು ಮೊದಲು ಬ್ಯಾನ್ ಮಾಡುವ ಕೆಲಸವನ್ನು ಮಾಡಬೇಕಾಗಿದೆ. ಈ ಕಸದಲ್ಲಿ ಪ್ಲಾಸ್ಟಿಕ್‌ನಿಂದಲೇ ಹೆಚ್ಚಿನ ಸಮಸ್ಯೆ ಬರುತ್ತಿರುವಂಥದ್ದು. ನಾವು ಕಸವನ್ನು ಏನು generate ಮಾಡುತ್ತೇವೆ, ಅದರಲ್ಲಿ ಪ್ಲಾಸ್ಟಿಕ್ de-generate ಆಗುವುದಕ್ಕೆ one million years ಬೇಕಾಗುತ್ತದೆಂದು ಹೇಳುತ್ತಾರೆ. ಪೇಪರ್ ಆದರೆ ಒಂದೆರಡು ವಾರಗಳಲ್ಲಿ de-generate ಆಗುತ್ತದೆ. ನಾವು ಪ್ಲಾಸ್ಟಿಕ್ ಅನ್ನು ಬ್ಯಾನ್ ಮಾಡಿದರೆ that will be a big solution to garbage. ಇದರಲ್ಲಿ ನಾವು ನೋಡಬೇಕಾಗಿರುವಂಥದ್ದು, ನಮ್ಮ ರಾಜ್ಯದಲ್ಲಿ ಸಣ್ಣ–ಪುಟ್ಟ ಯೂನಿಟ್‌ಗಳನ್ನು ಹಾಕಿದ್ದಾರೆ. ಆದರೆ ಖಂಡಿತವಾಗಿ ಆಗಬೇಕಾಗಿರುವಂಥ incineration ಎನ್ನುವ ಪದ್ಧತಿಯ ಮುಖಾಂತರ ನಾವು ಮಾಡಿದರೆ ಬಹುಶಃ ಈ ಸಮಸ್ಯೆಯೇ ನಮ್ಮ ಮುಂದೆ ಇರುವುದಿಲ್ಲ. ಆದರೆ ಏನಾಗುತ್ತಿದೆಯೆಂದರೆ, ಈ ಪ್ಲ್ಯಾಂಟ್ ಹಾಕುವುದಕ್ಕೆ ಯಾರೂ ಮುಂದೆ ಬರುತ್ತಿಲ್ಲ. ಈ ಪ್ಲ್ಯಾಂಟ್ ಹಾಕಲು ಮುಂದೆ ಬರುವವರು ಸುಮಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವತ್ತಿನ ಎಲ್ಲಾ ಪೇಪರ್‌ಗಳು ಕೂಡ "DNA" ಇರಬಹುದು, "Times" ಇರಬಹುದು. "Times" ನಲ್ಲಿ ಬಹಳ ವಿಶೇಷವಾಗಿ ಹೇಳಿದ್ದಾರೆ.

ಅಧ್ಯಕ್ಷರು:– ಪತ್ರಿಕೆ ಬೇಡ, ನೀವು ಹೇಳಿ. ನಿಮ್ಮ ಅಭಿಪ್ರಾಯ ಏನೆಂದು ಹೇಳಿ.

ಶ್ರೀ ಎನ್.ಎ. ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಅಲ್ಲಿರುವಂತಹ ಮಾಹಿತಿಯನ್ನು ನಾನು ಕೊಡುತ್ತಿದ್ದೇನೆ. Why can't we learn from Japanese? ಅಂತ "Times" ಹೇಳುತ್ತಾ ಇದೆ. ಇದನ್ನೆಲ್ಲಾ ನಾವು serious ಆಗಿ ನೋಡಬೇಕು.

ಅಧ್ಯಕ್ಷರು:– ಈ ಬಗ್ಗೆ ಸರ್ಕಾರ ಏನು ಮಾಡಬೇಕೆಂದು ಹೇಳಿ.

ಶ್ರೀ ಎನ್.ಎ. ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ಆಯಿತು, ಅದೇ ರೀತಿಯಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲೂ ಬಿ.ಬಿ.ಎಂ.ಪಿ. ಯಲ್ಲಿ ಏನೇನು ಆಗಿದೆಯೆಂಬುದನ್ನು ಬರೆದಿದ್ದಾರೆ. ಇವತ್ತು ಬೆಂಗಳೂರು ನಗರದಲ್ಲಿ 4,000 ಟನ್ ಒಂದು ದಿವಸಕ್ಕೆ ಕಸ ಉತ್ಪತ್ತಿಯಾಗುತ್ತಿದೆ. Garbage ಯಾರಿಗೂ ಬೇಡ, ಇದನ್ನು ಸಿಕ್ಕಿದ ಕಡೆ ಎಲ್ಲಾ ತೆಗೆದುಕೊಂಡು ಹೋಗಿ ಬಿಸಾಡುವಂಥ ಪರಿಸ್ಥಿತಿಯಾಗಿದೆ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಎನ್.ಎ. ಹ್ಯಾರಿಸ್:– ಮಾನ್ಯ ಅಧ್ಯಕ್ಷರೆ, ನಾವು ಏನು ಮಾಡಬೇಕೆಂದರೆ, ಇವತ್ತು ಇದನ್ನು ಒಂದು industry ಆಗಿ convert ಮಾಡಬೇಕಾಗುತ್ತದೆ. ಇದನ್ನು ನಾವು ಎಲ್ಲೋ ಹಳ್ಳಿ ಕಡೆಗೆ ತೆಗೆದುಕೊಂಡು ಹೋಗುವುದಲ್ಲ, ಸರ್ಕಾರದ KIADB ಯಲ್ಲಿ ಜಾಗವಿದೆ, ನಾವು ಈಗಾಗಲೇ ಬೆಂಗಳೂರಿನ ಸುತ್ತ–ಮುತ್ತಲೂ ಸುಮಾರು Karnataka Industrial Development areaಗಳನ್ನು develop ಮಾಡಿದ್ದೇವೆ. ಅಲ್ಲಿ 25–30–40 ಎಕರೆ ಜಾಗವನ್ನು ಒಂದೊಂದು ಯೂನಿಟ್‌ಗೆ ಕೊಡಬೇಕು. ಈ ಯೂನಿಟ್ ಅನ್ನು ಹಾಕುವುದಕ್ಕೆ ಬಂದಂಥವರು ಈಗಾಗಲೇ ಕಳೆದ ಸರ್ಕಾರದಿಂದ permission ತೆಗೆದುಕೊಳ್ಳಲು ಆಗದೇ ಸುಮಾರು ಜನರು ಓಡಿ ಹೋಗಿದ್ದಾರೆ. ಈಗ ನಾವು ಇವರಿಗೆ permission ಕೊಡುವಂಥದ್ದನ್ನು Single Widow Agency ಮುಖಾಂತರ ಮಾಡಬೇಕಾಗುತ್ತದೆ. ಅವರಿಗೆ ಜಾಗವನ್ನು free ಯಾಗಿ ಕೊಟ್ಟರೂ ಪರವಾಗಿಲ್ಲ, ಒಂದು ರೂಪಾಯಿಗೆ ಕೊಟ್ಟರೂ ಪರವಾಗಿಲ್ಲ. ಅವರಿಗೆ ಇವತ್ತು permission ಕೊಡಬೇಕು, pollution control ಇರಬಹುದು, ನಮ್ಮ industries permission ಇರಬಹುದು, ಇವೆಲ್ಲವನ್ನೂ ತೆಗೆದುಕೊಳ್ಳುವ ಹೊತ್ತಿಗೆ ಅವರು ಊರನ್ನು ಬಿಟ್ಟು ಓಡಿ ಹೋಗುವ ಪರಿಸ್ಥಿತಿ ನಮ್ಮ ಮುಂದೆ ಇದೆ. ಆದ್ದರಿಂದ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು committee ಯನ್ನು ರಚನೆ ಮಾಡಿ, ಬೆಂಗಳೂರಿನ ನಾಲ್ಕೈದು ಭಾಗಗಳಲ್ಲಿ ಒಂದೊಂದು

ಸಾವಿರ ಟನ್‌ನಷ್ಟು ಈ ಕಸವನ್ನು ಉಪಯೋಗಿಸುವಂಥ ಯೂನಿಟ್ ಅನ್ನು ಹಾಕಿದರೆ, ಅವರು ಕಸವನ್ನು ನಮ್ಮ ಮನೆಗೆ ಬಂದು ತೆಗೆದುಕೊಂಡು ಹೋಗುತ್ತಾರೆ. ಏಕೆಂದರೆ, ಈ ಯೂನಿಟ್ ಹಾಕಿದರೆ ಅದಕ್ಕೆ ಕಸವಿಲ್ಲವೆಂದರೆ ಅದು ನಡೆಯುವುದಿಲ್ಲ. ಅವರು ಕಸವನ್ನು ತೆಗೆದುಕೊಳ್ಳುವುದಕ್ಕೂ 20 ಪೈಸೆಯೋ, 50 ಪೈಸೆಯೋ, ಕೊಟ್ಟು ತೆಗೆದುಕೊಂಡು ಹೊಗುವ ಪರಿಸ್ಥಿತಿ ಮಾಡಿದರೆ ಯಾರೂ ಕಸವನ್ನು ತಂದು ರೋಡಿಗೆ ಹಾಕುವುದಿಲ್ಲ. ಇದನ್ನು ಕೊಟ್ಟು ಹಣವನ್ನು ತೆಗೆದುಕೊಳ್ಳುತ್ತಾರೆ, ಕಸ ಬೀದಿಗೆ ಬರುವುದಿಲ್ಲ, ಇದನ್ನು ಎಲ್ಲೋ ಹಳ್ಳಿಗೆ ತೆಗೆದುಕೊಂಡು ಹೋಗಿ ಹಾಕುವ ಪರಿಸ್ಥಿತಿಯೂ ಇರುವುದಿಲ್ಲ. ಆದ್ದರಿಂದ ನಾವು ಮೊದಲನೆಯದಾಗಿ, ಈ ಯೂನಿಟ್‌ಗಳನ್ನು ತರುವಂಥ ಕೆಲಸ ಆಗಬೇಕು, ಅವರನ್ನು ಪ್ರೋತ್ಸಾಹ ಮಾಡುವುದಕ್ಕೆ Tax Holiday ಕೊಡಬಹುದು, ಜಾಗವನ್ನು free ಯಾಗಿ ಕೊಡಬಹುದು. ಅವರಿಗೆ ಬೇಕಾದಂಥ permission ಅನ್ನು single shot ನಲ್ಲಿ ಕೊಟ್ಟರೆ ಎಲ್ಲರೂ ಬರುತ್ತಾರೆ, ಅವರೇ invest ಮಾಡುತ್ತಾರೆ. ನಮ್ಮ ಬಿ.ಬಿ.ಎಂ.ಪಿ.ಯಲ್ಲಿ ಹಣವಿಲ್ಲ, ಈಗಾಗಲೇ ಬೇರೆ ಕೆಲಸ ಮಾಡುವುದಕ್ಕೆ ಬಿ.ಬಿ.ಎಂ.ಪಿ.ಯಲ್ಲಿ ಹಣವಿಲ್ಲದೇ ಇರುವಂಥ ಪರಿಸ್ಥಿತಿ ಇದೆ. ಹಾಗಾಗಿ investorsಗೆ ಯಾವ ರೀತಿಯಾಗಿ ಬೇಕಾಗಿದೆ, ಆ ರೀತಿಯಲ್ಲಿ permission ಕೊಟ್ಟರೆ ಅವರು ಅದನ್ನು ಹಾಕಿದಾಗ ಖಂಡಿತವಾಗಿ ನಮ್ಮ ವಾರ್ಡ್‌ಗಳಿಂದ ಕಸವನ್ನು ಏನು ಲಾರಿಗಳಲ್ಲಿ ತೆಗೆದುಕೊಂಡು ಹೋಗುತ್ತಾರೆ, contractors ಏನು ಇದ್ದಾರೆ, ಅದನ್ನು ಕೊಡುವ ಬದಲು ಅವರೇ ಬಂದು ತೆಗೆದುಕೊಂಡು ಹೋಗುವಂಥದ್ದನ್ನು ನಾವು ಮಾಡಬಹುದು. ನಮ್ಮ ಸರ್ಕಾರ ಇದನ್ನು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ, ಪ್ಲಾಸ್ಟಿಕ್ ಅನ್ನು ಬ್ಯಾನ್ ಮಾಡುವಂಥ ಕೆಲಸವನ್ನು ಮೊದಲು ಮಾಡಬೇಕು. ಎರಡನೆಯದಾಗಿ, ಇದನ್ನು industryಯಾಗಿ convert ಮಾಡುವಂಥದ್ದು ಆಗಬೇಕು. ಆ ರೀತಿಯಾಗದಿದ್ದರೆ ಬೆಂಗಳೂರಿನಲ್ಲಿ ಸೊಳ್ಳೆ ಮತ್ತೆ ಬೀದಿಗಳಲ್ಲಿ ನಾಯಿಗಳು ಕಸವನ್ನು ಎಳೆದಾಡುವುದಕ್ಕೆ ಇದೆ, ಅಲ್ಲಿ ಜನರು ಓಡಾಡಿದರೆ ಜನರನ್ನೂ ಸೇರಿಸಿ ಎಳೆದಾಡುತ್ತಿದೆ. ನಾವು ಇದೆಲ್ಲವನ್ನೂ ದಿನನಿತ್ಯ

ಅನುಭವಿಸುತ್ತಿರುವಂಥದ್ದು, ದಯವಿಟ್ಟು ಇಲ್ಲಿ ನನಗೂ ಅರ್ಜೆಂಟ್ ಇದೆ, ತಮಗೂ ಅರ್ಜೆಂಟ್ ಇದೆ, ಬೆಂಗಳೂರು ಜನರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಸುಖ ಕೊಡುವಂಥ ಕೆಲಸವಾಗಬೆಕು. ಈ ವಿಷಯವಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಕೂಡ ಬಹಳಷ್ಟು ಪ್ರಯತ್ನ ಮಾಡುತ್ತಿದ್ದಾರೆ, ಆದರೆ ಇದು ಆಗುತ್ತಿಲ್ಲ. ಇದನ್ನು ನಿಜವಾಗಿಯೂ ಮಾಡಬೇಕೆಂದರೆ, ನಾವು ಹೇಳಿದಂತೆ ಮಾಡಿದರೆ ಮಾತ್ರ ಅದು ಆಗುತ್ತದೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ತರಾತುರಿಯಲ್ಲಿ ಹತ್ತು ನಿಮಿಷಗಳಲ್ಲಿ ಮಾತನಾಡಬೇಕೆಂದರೆ ಆಗುವುದಿಲ್ಲ. ಈ ವಿಷಯವನ್ನು ನಗರಾಭಿವೃದ್ಧಿ ಇಲಾಖೆಯ ವಿಷಯ ಬಂದಾಗ ಸುದೀರ್ಘವಾಗಿ ಚರ್ಚೆ ಮಾಡಬಹುದು. ಏಕೆಂದರೆ, ಈ ವಿಷಯವಾಗಿ 3–4 ಗಂಟೆಗಳು ಮಾತನಾಡುವುದಿದೆ. ನಾನು 10–15 ನಿಮಿಷಗಳಲ್ಲಿ ಮಾತನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಇದು ಗಂಭೀರವಾದ ಸಮಸ್ಯೆ ಇದೆ.

ಅಧ್ಯಕ್ಷರು:– ತಾವು ನಗರಾಭಿವೃದ್ಧಿ ವಿಷಯ ಬಂದಾಗ ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾನು ನಗರಾಭಿವೃದ್ಧಿ ಇಲಾಖೆಯ ವಿಷಯದಲ್ಲಿ ಮಾತನಾಡುವಾಗ ಮಾತನಾಡುತ್ತೇನೆ, ಈಗ ಹತ್ತು ನಿಮಿಷಗಳಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಆಯಿತು, ಮಾನ್ಯ ಅರವಿಂದ ಲಿಂಬಾವಳಿಯವರೆ ಮಾತನಾಡಿ.

ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂಥ ಹ್ಯಾರಿಸ್‌ರವರು ಈಗಾಗಲೇ ಬೆಂಗಳೂರಿನ ಕಸದ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗ ಕಸ ಹಾಕುತ್ತಿರುವ ಮಂಡೂರಿನಲ್ಲಿ ಜನ ನರಕಯಾತನೆಯನ್ನೇನು ಅನುಭವಿಸುತ್ತಿದ್ದಾರೆ, ಅದನ್ನು ಮಾನ್ಯ

ಕುಮಾರಸ್ವಾಮಿಯವರೂ ಕಣ್ಣಾರೆ ಕಂಡಿದ್ದಾರೆ ಮತ್ತು ಅದಕ್ಕೆ ಸ್ಪಂದಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಅವರು ಈ ವಿಚಾರದಲ್ಲಿ 2–3 ಗಂಟೆಗಳಷ್ಟು ಪ್ರಸ್ತಾಪ ಮಾಡುವಷ್ಟು ವಿಷಯವಿದೆ ಎಂದು ಹೇಳಿರುವುದರಿಂದ, ಈ ಸಮಸ್ಯೆ ಎಷ್ಟು ತೀವ್ರವಾಗಿದೆ ಎಂದು ತಾವು ಅರ್ಥಮಾಡಿಕೊಳ್ಳುತ್ತೀರಿ ಎಂದು ನಾನು ಭಾವಿಸುತ್ತೇನೆ. ಮಂಡೂರು ನನ್ನ ವಿಧಾನಸಭಾ ಕ್ಷೇತ್ರದ ಕೆಳಗೆ ಬರುತ್ತದೆ. ಆ ಮಂಡೂರಿನಲ್ಲಿ 2004ರಲ್ಲಿ 135 ಎಕರೆ ಜಾಗವನ್ನು land fill/ಗೋಸ್ಕರ ಅಂದಿನ ಸರ್ಕಾರ ಅವಕಾಶವನ್ನು ಮಾಡಿಕೊಟ್ಟಿತು. 2006ರಿಂದ ಆ land fill ನಲ್ಲಿ ಕಸವನ್ನು ಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ. 2006ರಿಂದ ಅಲ್ಲಿ ಕಸ ಹಾಕುತ್ತಿದ್ದಾರೆಯೇ ಹೊರತು ಯಾವುದೇ treatment ಅಲ್ಲಿ ನಡೆದಿಲ್ಲ. ಒಂದು ಲೆಕ್ಕಾಚಾರವನ್ನು ತೆಗೆದುಕೊಂಡರೆ ನಿನ್ನೆಯವರೆಗೆ ಸುಮಾರು 25 ಲಕ್ಷ ಟನ್‌ಗಳಷ್ಟು ಕಸ ಅಲ್ಲಿ ಬಿದ್ದಿದೆ. 2006ರಿಂದ ಇಲ್ಲಿಯವರೆಗೆ ಅಲ್ಲಿ ಬಿದ್ದಿರುವ ಕಸದ ಪರಿಣಾಮ ಏನಾಗಿದೆ ಎಂದರೆ ಅಲ್ಲಿ ಮುಂಚೆ ಗುಂಡಿ ಇದ್ದದ್ದು ಈಗ ಪರ್ವತವಾಗಿದೆ. ಅಲ್ಲಿ ನಡೆಯುತ್ತಿರುವಂಥ ಚಟುವಟಿಕೆಯ ಬಗ್ಗೆ ನಾನು ಒಂದು C.D. ಕೂಡ ಮಾಡಿ ಮಾನ್ಯಮುಖ್ಯಮಂತ್ರಿಗಳಿಗೆ ತೋರಿಸಿದ್ದೆ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ವಿವರಿಸಲು ನನಗೆ ಸ್ವಲ್ಪ ಟೈಂ ಕೊಟ್ಟರೆ ನಾನು ಹೇಳಲಿಕ್ಕೆ ಸಾಧ್ಯ. ಅದಕ್ಕೆ ಹಿರಿಯರಾದಂಥ ಕುಮಾರಸ್ವಾಮಿಯವರು ಈ ಬಗ್ಗೆ 2–3 ಗಂಟೆ ಹೇಳಬೇಕಾಗುತ್ತದೆ ಎಂದು ಹೇಳಿದರು. ದಯವಿಟ್ಟು ತಾವು ಅವಕಾಶ ಕೊಡಬೇಕು. ಮಂಡೂರಿನ ಗ್ರಾಮಸ್ಥರು ಮಂಡೂರಿನಲ್ಲಿ ಕಸ ಹಾಕುವುದನ್ನು ತಡೆದರು ಎಂದರೆ ಇಡೀ ಬೆಂಗಳೂರಿನಲ್ಲಿ ಕಸ ಬೀಳುತ್ತದೆ. ಇದರ ದುಷ್ಪರಿಣಾಮವನ್ನೂ ಕೂಡ ನಾವು ಎದುರಿಸಿದ್ದೇವೆ. ಅಲ್ಲಿ ಕಸ ಹಾಕುವುದರಿಂದ ಏನೇನು ಪರಿಣಾಮವಾಗಿದೆ ಎಂದರೆ ಮೊದಲನೆಯದಾಗಿ ಅಲ್ಲಿನ ಜನರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತಿದೆ. ಸಾಂಕ್ರಾಮಿಕ ರೋಗಗಳು ಹರಡುತ್ತಿವೆ. ಅಲ್ಲಿ ಕುಡಿಯುವ ನೀರು ಯಾವ ಪ್ರಮಾಣದಲ್ಲಿ ಕಲುಷಿತವಾಗಿದೆ ಎಂದರೆ, ಅಲ್ಲಿ ಹಾಕುವ ಹಸಿ ಕಸದಿಂದ ಹೊರಬರುವ Leachate ಕೊಳೆ ನೀರಿನಿಂದ ಆ ಗ್ರಾಮದ ಸುತ್ತ ಇರುವ

ಕೆರೆಗಳು, ಅದು ಗುಂಡೂರು ಇರಬಹುದು, ಮಂಡೂರು ಇರಬಹುದು ಬೆನ್ನಿಗಾನಹಳ್ಳಿ ಇರಬಹುದು, ಹೀಗೆ ಎಲ್ಲ ಕಡೆಗಳಲ್ಲಿ ಕೆರೆಗಳು contaminate ಆಗಿವೆ. ಮನುಷ್ಯರಷ್ಟೇ ಅಲ್ಲ. ದನಕರುಗಳೂ ಸಹ ಈ ಯಾವುದೇ ಕೆರೆಗಳ ನೀರನ್ನು ಕುಡಿಯಲು ಸಾಧ್ಯವಾಗದೇ ಇರುವಂಥ ಪರಿಸ್ಥಿತಿ ಇದೆ. ಅಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಬೆಂಗಳೂರಿನಿಂದ ಇಲ್ಲಿಗೆ ಕಸ ಹೊತ್ತುಕೊಂಡು ಬರುವಂಥ ಲಾರಿಗಳು ಎಲ್ಲ ರಸ್ತೆಯಲ್ಲೂ ಬರುತ್ತವೆ. ಅವುಗಳು ಬರುವಾಗ ಎಲ್ಲ ರಸ್ತೆಗಳನ್ನೂ ಕಸ ಚೆಲ್ಲಿಕೊಂಡು ಬರುತ್ತವೆ. ಕಸದ ಲಾರಿಗಳು ಯಾವುವೂ ಕೂಡ ಕವರ್ ಆಗಿರುವಂಥವುಗಳಲ್ಲ, ಓಪನ್ ಇರುವಂಥ ಲಾರಿಗಳಾಗಿವೆ. ಆ ಲಾರಿಗಳು ಕಸವನ್ನು ರಸ್ತೆಗಳಲ್ಲಿ ಚೆಲ್ಲಿಕೊಂಡು ಬರುವುದಷ್ಟೇ ಅಲ್ಲ. ನಮ್ಮ ಗ್ರಾಮೀಣ ರಸ್ತೆಗಳನ್ನು ಸಂಪೂರ್ಣವಾಗಿ ಹಾಳುಮಾಡಿಬಿಟ್ಟಿವೆ.

ಅಧ್ಯಕ್ಷರು:– ಕಸ ವಿಲೇವಾರಿ ಮಾಡುವ ವಿಚಾರದಲ್ಲಿ ಯಾವ ರೀತಿ ಕ್ರಿಯಾ ಯೋಜನೆಯನ್ನು ಮಾಡಬೇಕು, ಏನನ್ನು ಮಾಡಿದರೆ ಇದನ್ನು ತಡೆಗಟ್ಟುವುದಕ್ಕೆ ಆಗುತ್ತದೆ ಎನ್ನುವ ಬಗ್ಗೆ ಸಲಹೆ ನೀಡಿ.

ಶ್ರೀ ಅರವಿಂದ ಲಿಂಬಾವಳಿ:– ಸಲಹೆ ಕೊಡುವುದಕ್ಕೆ ಮುಂಚೆ ಅದರ ಹಿನ್ನೆಲೆಯನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು:– ಇವೆಲ್ಲ ಗೊತ್ತಿದೆ ಸ್ವಾಮಿ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಅಲ್ಲಿ ನಾವೆಷ್ಟು ಕಷ್ಟ ಅನುಭವಿಸುತ್ತಿದ್ದೇವೆ ಎನ್ನುವುದು ತಮ್ಮ ಮುಖಾಂತರ ಎಲ್ಲ ಸದಸ್ಯರಿಗೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:– ಕಸವನ್ನು ಏನು ಮಾಡಬೇಕೆನ್ನುವುದನ್ನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಕಸ ಏನು ಮಾಡಬೇಕು ಎನ್ನುವುದು ಸಮಸ್ಯೆಯಿಲ್ಲ. ಅದನ್ನು ಮಾಡಲಿಕ್ಕೆ ಅಧಿಕಾರವಿರುವವರು ಮಾಡಲಿಕ್ಕೆ ತಯಾರಿಲ್ಲ. 2006ರಿಂದ ಮಂಡೂರಿನಲ್ಲಿ ಕಸ ಹಾಕುತ್ತಿದ್ದಾರೆ ಎಂದು

ಹೇಳಿದರು. ಈಗ 2014ರಲ್ಲಿದ್ದೇವೆ. ಇಲ್ಲ ನಡೆದಿರುವ ಕರ್ಮಕಾಂಡಗಳನ್ನೆಲ್ಲ ಚರ್ಚೆ ಮಾಡಿ, ಇದರ ಬಗ್ಗೆ ಮುಂದೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ನಾವು ಸಲಹೆಗಳನ್ನು ಕೊಡಲೂ ತಯಾರಾಗಿದ್ದೇವೆ. ಸಮಸ್ಯೆಯನ್ನು ಪರಿಹಾರ ಮಾಡಲು ಬಂದಂಥ ಹಲವಾರು ಜನರಿಗೆ ಬಿಬಿಎಂಪಿಯಲ್ಲಿ ಡಿಸ್ಕರೇಜ್ ಮಾಡಿ ಕಳುಹಿಸಿದ್ದಾರೆ. ಇದರಲ್ಲಿ ಒಂದು ದೊಡ್ಡ ಮಾಫಿಯಾ ಇದೆ ಎಂದು ಚೀಫ್ ಸೆಕ್ರೆಟರಿಯವರು ಹೇಳುತ್ತಾರೆ. ಚೀಫ್ ಸೆಕ್ರೆಟರಿಯವರೇ ಮಾಫಿಯಾ ಇದೆ ಎಂದು ಹೇಳಿದ ಮೇಲೆ, ಮಾಫಿಯಾ ಮೇಲೆ ಈ ಸರ್ಕಾರದ ಕಂಟ್ರೋಲ್ ಇಲ್ಲ ಎಂದಾಯಿತು. ಇದನ್ನು ಒಬ್ಬ ಸಾಮಾನ್ಯ ಪ್ರಜೆ ಹೇಳಿರುವುದಲ್ಲ. ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಾಗ, 2013ರ ಜುಲೈನಲ್ಲಿ ಹೇಳಿದರು, ನನಗೆ ಐದು ವರ್ಷ ಬೇಕಿಲ್ಲ, ಆರು ತಿಂಗಳಲ್ಲಿ ನಾನು ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಮಾಧ್ಯಮಗಳಿಗೆ ಹೇಳಿದ್ದಾರೆ. ನಗರದ ಜಿಲ್ಲಾ ಉಸ್ತುವಾರಿ ಹೇಳುತ್ತಾರೆ, ಕಾರ್ಪೊರೇಷನ್ ಅಧಿಕಾರಿಗಳಿಗೆ ಐದು ತಿಂಗಳು ಸಮಯ ಕೊಡುತ್ತೇನೆ, ಐದು ತಿಂಗಳಲ್ಲಿ ಮಂಡೂರು ಸಮಸ್ಯೆಯನ್ನು ಬಗೆಹರಿಸದಿದ್ದರೆ, ಅಲ್ಲಿಗೆ ಕಸ ತೆಗೆದುಕೊಂಡು ಹೋಗಬೇಡಿ, ಅದಕ್ಕೆ ನಿಮ್ಮನ್ನೇ ಹೋಣೆಗಾರರನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಒಂದು ರೀತಿ ಚೆಲ್ಲಾಟವಾಗಿದೆ. ನಾನು ಹಲವಾರು ಮಾಹಿತಿಗಳನ್ನೂ ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ವಿವರವಾದ ಚರ್ಚೆಯಾಗಬೇಕು ಎಂದು ನಾನು ಆಗಲೇ ಹೇಳಿದ್ದೇನೆ. ಇದಕ್ಕೆ ಪರಿಹಾರ ಕಂಡುಹಿಡಿಯಲು ಅವಕಾಶವಿದೆ. ಶಾರದಮ್ಮ ಎನ್ನುವ ಮಾಜಿ ಮೇಯರ್ ಇತ್ತೀಚೆಗೆ ಹೇಳಿದರು, ಮೇಯರ್ ಮತ್ತು ಅಧಿಕಾರಿಗಳು ಮುಂಬೈಗೆ ಹೋಗಿ ಅಲ್ಲಿ ಯಾವ ರೀತಿ ಕಸ ವಿಲೇವಾರಿ ಮಾಡುತ್ತಿದ್ದಾರೆ ಎಂದು ನೋಡಿಕೊಂಡು ಬಂದಿದ್ದಾರೆ. ಅವರ ಜೊತೆ ನಮ್ಮ ಅಶ್ವತ್ಥನಾರಾಯಣರವರೂ ಹೋಗಿದ್ದರೇನೋ ಗೊತ್ತಿಲ್ಲ. ಜಯನಗರದ ಶಾಸಕರಾದ ವಿಜಯಕುಮಾರ್‌ರವರು ಮತ್ತು ರವಿ ಸುಬ್ರಹ್ಮಣ್ಯರವರು ಹೋಗಿ ಬಂದಿದ್ದಾರೆ. ಮುಂಬೈಯಲ್ಲಿ ಆಂತೋಣಿ ಎನ್ನುವವರು ಕಸ ವಿಲೇವಾರಿ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಮೊನ್ನೆ ನಾನು ಅವರಿಗೆ ಫೋನ್

ಮಾಡಿದ್ದೆ. ಅಲ್ಲಿ ಅವರು ಬಹಳ ಉತ್ತಮವಾದಂಥ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ, ಅದನ್ನು ಇಲ್ಲಿ ಇಂಪ್ಲಿಮೆಂಟ್ ಮಾಡಲು ಬಿಡಲಿಲ್ಲ ಎಂದು ಮೇಯರ್ ಆಗಿದ್ದಂಥ ಶಾರದಮ್ಮನವರು 15 ದಿವಸಗಳ ಹಿಂದೆ ಒಂದು ಹೇಳಿಕೆ ಕೊಟ್ಟಿದ್ದಾರೆ. ಇಲ್ಲಿ ನಾವು ಹಲವಾರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ, ಪ್ರತಿವರ್ಷ ಇದಕ್ಕಾಗಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಇದನ್ನು ಎಲ್ಲಿಗೆ ತಂದು ನಿಲ್ಲಿಸಿಕೊಂಡಿದ್ದಾರೆ ಎಂದರೆ, ಇದು ಕೇವಲ ಮಂಡೂರಿನ ಜನರ ಸಮಸ್ಯೆ ಮಾತ್ರವಲ್ಲ, ಮಂಡೂರಿನಲ್ಲಿ 25 ಲಕ್ಷ ಟನ್ ಕಸವನ್ನು ತೆಗೆದುಕೊಂಡು ಹೋಗಿ ತುಂಬಿದ್ದಾರಲ್ಲ, ಅದನ್ನು ಸರಿಪಡಿಸುವುದಕ್ಕೆ ಏನಾದರೂ ಬದಲಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆಯೇ? ಇದರಲ್ಲಿ ಹಲವಾರು technical issues ಇವೆ. ಇವತ್ತು ಬೆಂಗಳೂರಿನ ಜನರು ಸರ್ಕಾರದ ಖಜಾನೆಗೆ 70–75% ಹಣವನ್ನು ತುಂಬುತ್ತಾರೆ. ಈ ಜನರಿಗೆ ನಾವೇನು ಕೊಡುತ್ತಿದ್ದೇವೆ? ಮುಂದಿನ ಪೀಳಿಗೆಗೆ ನಾವೇನು ಕೊಡುತ್ತಿದ್ದೇವೆ? ಇದೆಲ್ಲವೂ ಈ ಸದನದಲ್ಲಿ ಚರ್ಚೆಯಾಗಬೇಕಾಗಿದೆ. ಈಗ 5.45 ಗಂಟೆಯಾಗಿದ್ದು, ಇದನ್ನು ಈಗ ಪ್ರಾರಂಭ ಮಾಡಿದರೂ ಇದು ಮುಗಿಯಲು 8–9 ಗಂಟೆಯಾಗುತ್ತದೆ. ಈಗ ಮುಂದುವರೆಸುವುದಕ್ಕೆ ಸಿದ್ಧರಿದ್ದೀರಿ ಎಂದರೆ ನಾನು ಪ್ರಾರಂಭ ಮಾಡುತ್ತೇನೆ. ಇಲ್ಲದಿದ್ದರೆ ನಗರಾಭಿವೃದ್ಧಿ ವಿಷಯ ಬಂದಾಗ ಚರ್ಚೆ ಮಾಡೋಣ.

ಅಧ್ಯಕ್ಷರು:– ಅವರು ಈಗ ಮಾತನಾಡಲಿ, ನೀವು ಬೇಡಿಕೆ ಬಂದಾಗ ಚರ್ಚೆ ಮಾಡಿ. ನೀವು ಐದು ನಿಮಿಷದಲ್ಲಿ ಪೂರೈಸಿ.

ಶ್ರೀ ಅರವಿಂದ ಲಿಂಬಾವಳಿ:– 2006ರಿಂದ ಹಾಕಿರುವ ಕಸವನ್ನು ಐದು ನಿಮಿಷದಲ್ಲಿ ಹೇಳಿ ಎಂದರೆ ಹೇಗೆ ಸಾಧ್ಯ?

ಅಧ್ಯಕ್ಷರು:– ಹಾಗಿದ್ದರೆ ಆಗ ಏನು ಮಾಡಿದರು? ಆಗ ನಿಮ್ಮದೇ ಸರ್ಕಾರವಿತ್ತು, ನೀವು ಮಂತ್ರಿಯಾಗಿದ್ದಿರಿ.

ಶ್ರೀ ಅರವಿಂದ ಲಿಂಬಾವಳಿ:– ಅದಕ್ಕೇ ಬರೋಣ. ಆಗಿನಿಂದ ಏನು ನಡೆದಿದೆ ಎನ್ನುವುದನ್ನೆ ನಾನು ಹೇಳುತ್ತಿರುವುದು. ಇದರಿಂದ ಬಹಳ ಕೆಟ್ಟ

ಪರಿಣಾಮವಾಗಿರುವುದು ಏನೆಂದರೆ, ಕುಡಿಯುವ ನೀರು ಒಂದೇ ಅಲ್ಲ, ಗಾಳಿಯೂ ಸಹ ಹಾಳಾಗಿದೆ.

ಅಧ್ಯಕ್ಷರು:– ಅದಕ್ಕೆ ಪರಿಹಾರ ಏನು ಮಾಡಬೇಕೆಂದು ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಮೊದಲನೆಯದಾಗಿ ಮತ್ತು ಬಹಳ ಮುಖ್ಯವಾಗಿ, ಸರ್ಕಾರ ಬಿಬಿಎಂಪಿಯವರಿಗೆ ಜಾಗ ಕೊಡಬೇಕು. ಬಿಬಿಎಂಪಿ ಲಿಮಿಟ್ಸ್ ಬಿಟ್ಟು ಬೇರೆ ಕಡೆ ಕಸ ಹಾಕಬೇಕೆಂದರೆ ಆಗುವುದಿಲ್ಲ. ಈಗ ಮಂಡೂರಿನಲ್ಲಿ ಕಸ ಪೂರ್ತಿ ತುಂಬಿ ಹೋಗಿದೆ, ಅಲ್ಲಿ ಕಸ ಹಾಕಲು ಸಾಧ್ಯವಿಲ್ಲ. ಅದಕ್ಕಿಂತ ಮುಂಚೆ ಮಾವಳ್ಳಿಪುರದಲ್ಲಿ ಹಾಕುತ್ತಿದ್ದರು. ಅದಕ್ಕಿಂತ ಹಿಂದೆ ಹೋದರೆ ಇನ್ಯಾವುದೋ ಊರಿನಲ್ಲಿ ಹಾಕುತ್ತಿದ್ದರು. ಈ ರೀತಿ ಬರೀ ಊರುಗಳನ್ನು ಬದಲಾಯಿಸುತ್ತಾ ಹೋದರೆ ಆಗುವುದಿಲ್ಲ. ಮಾನ್ಯ ಕುಮಾರಸ್ವಾಮಿಯವರು ಪರೋಕ್ಷವಾಗಿ ಪ್ರಸ್ತಾಪ ಮಾಡಿದರು, ಅದೇನೆಂದರೆ, ಕಸ ಸಂಸ್ಕರಣೆಗೋಸ್ಕರ ಮುಂದೆ ಬರುವವರನ್ನು ಅಧಿಕಾರಿಗಳು ಹೆದರಿಸಿ ಓಡಿಸಿ ಕಳುಹಿಸುತ್ತಾರೆ.

ಅಧ್ಯಕ್ಷರು:– ಅಷ್ಟು ದೊಡ್ಡವರಿದ್ದಾರೆಯೇ?

ಶ್ರೀ ಅರವಿಂದ ಲಿಂಬಾವಳಿ:– ಅಷ್ಟು ದೊಡ್ಡ ಪ್ರಮಾಣದಲ್ಲಿದೆ. ಇದೊಂದು ದೊಡ್ಡ ಮಾಫಿಯಾ.

ಅಧ್ಯಕ್ಷರು:– ಹಾಗಿದ್ದರೆ, ಯಾರು ಎಂದು ನಿಮಗೆ ಗೊತ್ತಿರಬೇಕಲ್ಲವೇ?

ಶ್ರೀ ಅರವಿಂದ ಲಿಂಬಾವಳಿ:– ಅದನ್ನೇ ಹೇಳುತ್ತಿದ್ದೇನೆ, ನೀವು ಕೇಳುವುದಕ್ಕೆ ತಯಾರಿಲ್ಲವಲ್ಲ. ನಾನು ಹೇಳುವುದಕ್ಕೆ ತಯಾರಿದ್ದೇನೆ, ನೀವು ಕೇಳುವುದಕ್ಕೆ ತಯಾರಿಲ್ಲ. ಅಲ್ಲಿರುವ ಬಿಲ್ಡರ್ಸ್ ಈ ಹೋರಾಟವನ್ನು ಎತ್ತಿ ಕಟ್ಟುತ್ತಿದ್ದಾರೆ ಎಂದು ಚೀಫ್ ಸೆಕ್ರೆಟರಿಯವರು ಒಂದು ಹೇಳಿಕೆ ಕೊಟ್ಟರು. ಅವರು ಅಲ್ಲಿಗೇ ಹೋಗಿ ಒಂದು ವಾರ ಹಾಲ್ಟ್ ಮಾಡಿದರೆ ಅವರಿಗೆ ಸಮಸ್ಯೆ ಏನೆಂದು ಬಹಳ ಚೆನ್ನಾಗಿ ಗೊತ್ತಾಗುತ್ತದೆ.

ಶ್ರೀ ಸಿ.ಟಿ. ರವಿ:– ಬೇರುಗಳು ಯಾರ್ಯಾರದೋ ಮನೆಗೆ ಹೋಗಿ ಸೇರಿಕೊಂಡುಬಿಡುತ್ತವೆ. ಆ ಬೇರುಗಳನ್ನು ಹುಡುಕುತ್ತಾ ಹೋದರೆ, ಅವು ಯಾರ್ಯಾರದೋ ಮನೆಗೆ ಹೋಗಿ ನಿಂತುಬಿಟ್ಟಿವೆ. ಆ ಮನೆಯ ಬಾಗಿಲು ತಟ್ಟಿ ಬೇರನ್ನು ಕತ್ತರಿಸಬೇಕು.

ಅಧ್ಯಕ್ಷರು:– ಈಗ ಏನು ಮಾಡುವುದು? ಕುಮಾರಸ್ವಾಮಿಯವರು ಹೇಳಿದ ಹಾಗೆ ಇನ್ನೊಂದು ದಿವಸ ಇದರ ಬಗ್ಗೆ ಚರ್ಚೆ ಮಾಡೋಣ. ಎಷ್ಟು ಹೊತ್ತು ಬೇಕಾದರೂ ಮಾಡೋಣ. ಈಗ ಸ್ವಲ್ಪ ಸಮಯದ ಕೊರತೆಯಿರುವುದರಿಂದ ಸಹಕರಿಸಿ.

ಶ್ರೀ ಅರವಿಂದ ಲಿಂಬಾವಳಿ:– ಅಲ್ಲಿ ಕುಡಿಯುವ ನೀರು contaminate ಆಗಿದೆ, ಉಸಿರಾಡುವ ಗಾಳಿ contaminate ಆಗಿದೆ. ಯಾರೋ ಮಾಫಿಯಾದವರು ಗಲಾಟೆ ಮಾಡಿಸುತ್ತಾರೆ ಎಂದು ಚೀಫ್ ಸೆಕ್ರೆಟರಿಯವರು ಹೇಳಿಬಿಟ್ಟರೆ ಹೇಗೆ? ಅಲ್ಲಿ ಜನ ಹೇಗೆ ಬದುಕುತ್ತಿದ್ದಾರೆ ಎಂದು ತಿಳಿಯಲು ಅವರು ಅಲ್ಲಿ ಒಂದು ವಾರ ಇದ್ದು ಬರಲಿ. ಒಂದು ವಾರ ಬೇಡ, ಆರು ಗಂಟೆ ಇದ್ದು ಬರಲಿ ಸಾಕು. ಅಂಥ ಪರಿಸ್ಥಿತಿ ಇವತ್ತು ಅಲ್ಲಿ ಇದೆ. ಕಸ ಸಂಸ್ಕರಣೆ ಮಾಡುವುದನ್ನು ಇಬ್ಬರಿಗೆ ಕೊಟ್ಟಿದ್ದಾರೆ. ಎರಡನ್ನೂ ನಾನು ಹೇಳುತ್ತೇನೆ. ಗಾಯತ್ರಿ ಶ್ರೀನಿವಾಸ್ ಎನ್ನುವವನು ಈ ಕಸದಿಂದ ಪವರ್ ಜನರೇಟ್ ಮಾಡುತ್ತೇನೆ ಎಂದು ಬಂದ. ಅವನು ಇನ್ನೂ ಅಲ್ಲೇ ಇದ್ದಾನೆ. ಅವನು ಬಿಬಿಎಂಪಿಯನ್ನು ಮತ್ತು ಸರ್ಕಾರವನ್ನು ಎಷ್ಟರ ಮಟ್ಟಿಗೆ ದುರುಪಯೋಗ ಮಾಡಿಕೊಂಡಿದ್ದಾನೆ ಎಂದರೆ ಬಿಬಿಎಂಪಿ ಜಮೀನನ್ನೇ ಅವನಿಗೆ 80 ಕೋಟಿ ಸಾಲ ಕೊಡಿಸುವುದಕ್ಕೋಸ್ಕರ ಬಿಬಿಎಂಪಿಯವರು collateral security ಯಾಗಿ ಕೊಟ್ಟಿದ್ದಾರೆ.

ಅಧ್ಯಕ್ಷರು:– ಕೊಟ್ಟಿರುವುದು ಯಾರು?

ಶ್ರೀ ಅರವಿಂದ ಲಿಂಬಾವಳಿ:– ಬಿಬಿಎಂಪಿಯವರು ಅವರ ಜಾಗವನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಕಸದ ನಿರ್ವಹಣೆ ಮಾಡುತ್ತೇನೆಂದು ತೆಗೆದುಕೊಂಡಂಥ ಬಿಬಿಎಂಪಿ ಜಾಗವನ್ನು ಎಲ್ಲೋ ಪ್ಲೆಡ್ಜ್ ಮಾಡಿ, ಅದರ ಮೇಲೆ 80 ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಂಡು ಬೇರೆ ವ್ಯವಹಾರವನ್ನು ಮಾಡುತ್ತಿದ್ದಾನೆ. ಇದು ಸರ್ಕಾರಿಜಾಗ

ಅಧ್ಯಕ್ಷರು:– ಸರ್ಕಾರಿ ಜಾಗವನ್ನು ಅವನು ಹೇಗೆ ಕೊಡುತ್ತಾನೆ?

ಶ್ರೀ ಅರವಿಂದ ಲಿಂಬಾವಳಿ:– ಕೊಟ್ಟಿದ್ದಾರೆ, ಅದನ್ನೇ ನಾವು ಹೇಳುತ್ತಿರುವುದು.

ಅಧ್ಯಕ್ಷರು:– ಆಗ ನೀವೇ ಇದ್ದಿರಲ್ಲ, ಆಗ ನೀವು ಮತ್ತಿನ್ನೇನು ಮಾಡಿದಿರಿ?

ಶ್ರೀ ಅರವಿಂದ ಲಿಂಬಾವಳಿ:– ನಮಗೆ ನಿಮಗೆ ಅರ್ಥವಾಗದೇ ಇರುವುದನ್ನು ಅಧಿಕಾರಿಗಳು ಮಾಡುತ್ತಿದ್ದಾರೆ. ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಎನ್.ಎ. ಹ್ಯಾರಿಸ್:– ಅಧ್ಯಕ್ಷರೆ, ಯಾರ ಕಾಲದಲ್ಲಿ ಆಯಿತು ಎಂದು ನೀವು ಕೇಳಬೇಕು.

ಶ್ರೀ ಅರವಿಂದ ಲಿಂಬಾವಳಿ:– ಅವನು 2008ರಲ್ಲಿ ಬಂದ.

ಅಧ್ಯಕ್ಷರು:– ಅವನು ಆಗ ಮಾಡಿದ್ದರೂ ಅದನ್ನು ಸರಿಪಡಿಸಲು ನಿಮಗೆ ಅವಕಾಶವಿತ್ತಲ್ಲವೇ? ಆಯಿತು, ಈಗ ಹೇಳಿ ಮಹರಾಯರೇ.

ಶ್ರೀ ಅರವಿಂದ ಲಿಂಬಾವಳಿ:– ಸರಿಪಡಿಸುವುದಕ್ಕೆ ಅವಕಾಶವಿತ್ತು. ಅವರು ಈಗ ಬಂದಿದ್ದಾರಲ್ಲ, ಸರಿಪಡಿಸಲಿ.

ಅಧ್ಯಕ್ಷರು:– ಏನು ಮಾಡಬೇಕು ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– 2004ರಲ್ಲಿ ಅವರ ಕಾಲದಲ್ಲಿ ಶುರುವಾಗಿದ್ದು ಇದು.

ಅಧ್ಯಕ್ಷರು:– ಹೌದಾ?

ಶ್ರೀ ಅರವಿಂದ ಲಿಂಬಾವಳಿ:– 2004ರಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಶುರುವಾಗಿದ್ದು. Electrical power ಕೊಡುತ್ತೇವೆ, ಮಾಡುತ್ತೇವೆಂದು ಬಂದಾಗ, ಅವರೇ ಗಾಯತ್ರಿ ಶ್ರೀನಿವಾಸ್ ಎನ್ನುವವರಿಗೆ permission ಕೊಟ್ಟಿದ್ದು. ಅಷ್ಟೇ ಅಲ್ಲ, ಅವರಿಗೆ tipping charge ಎಂದು ಬೇರೆ ಕೊಡುತ್ತಾರೆ. ಅವನು ಒಂದು ಟನ್ ಕಸ process ಮಾಡಿದರೆ ಇಷ್ಟು ಹಣ ಕೊಡುತ್ತೇವೆ ಎನ್ನುತ್ತಾರೆ. ಅದು ಬೇರೆ ಇದೆ. ಅದಲ್ಲದೆ, ಅವರು compound ಕಟ್ಟುವುದಕ್ಕೂ BBMP ಯೇ ಹಣ ಕೊಟ್ಟಿರುವುದು. ಅವನು factory ಕಟ್ಟುವುದಕ್ಕೂ BBMP ಹಣ ಕೊಟ್ಟಿರುವುದು. ಸಾಲದಲ್ಲಿದ್ದಾನೆ, ನೀನು ಸಾಲ ತೆಗೆದುಕೊಳ್ಳಪ್ಪ ಎಂದು 6 ಎಕರೆ ಜಮೀನನ್ನು ಅವನಿಗೆ ಅಡ ಇಟ್ಟು ಸಾಲ ತೆಗೆದುಕೋ ಎಂದು ಅವನಿಗೆ ಸಾಲ ಬೇರೆ ಕೊಡಿಸಿದ್ದಾರೆ. ಅದಲ್ಲದೆ, Organic Waste ಎನ್ನುವ ಇನ್ನೊಬ್ಬರು ಬೆರೆ ಬಂದಿದ್ದಾರೆ. He is a waste fellow. ಅವರು Court ಮುಖಾಂತರ ಬಂದಿದ್ದಾರೆ. Court ಮುಖಾಂತರ ಬಂದು process ಅನ್ನು ಮಾಡಬೇಕು.

ಅಧ್ಯಕ್ಷರು:– ಕುಮಾರಸ್ವಾಮಿಯವರು ಹೇಳಿದ್ದು correct. ಇದೆಲ್ಲವನ್ನೂ ನೀವು ಬಿಚ್ಚಿಡಬೇಕೆಂದರೆ ಕಾಲಾವಕಾಶ ಬೇಕು.

ಶ್ರೀ ಅರವಿಂದ ಲಿಂಬಾವಳಿ:– ಬಹಳ ಬೇಕಾಗುತ್ತದೆ. ಅಲ್ಲಿ ಏನೂ ನಡೆಯುತ್ತಿಲ್ಲ.

ಅಧ್ಯಕ್ಷರು:– ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಶ್ರೀ ಅರವಿಂದ ಲಿಂಬಾವಳಿ:– ಅದಕ್ಕೋಸ್ಕರ ಅವರು ಬಂದಿದ್ದಾರೆ. ಅವರೆಷ್ಟು ಮಾಡುತ್ತಾರೆ?

ಶ್ರೀ ಸಿ.ಟಿ. ರವಿ:– ಕಸದಲ್ಲಿ ರಸ ಬೇರೆ. ಕಸದ ಹೆಸರಿನಲ್ಲಿ ರಸ ಬೇರೆ.

ಶ್ರೀ ಅರವಿಂದ ಲಿಂಬಾವಳಿ:– ನಾನು ಎರಡನೇ ಉದಾಹರಣೆ ಹೇಳುತ್ತಿದ್ದೇನೆ. Organic Waste ಎನ್ನುವವರು Court ಮುಖಾಂತರ ಬಂದಿದ್ದಾನೆ. . . . ಅದನ್ನು ಬಿಡೋಣ ಅಧ್ಯಕ್ಷರೆ. ತಾವು ಈಗ ಸಮಯ

ಇಲ್ಲವೆಂದು ಹೇಳುತ್ತಿದ್ದೀರಿ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದಿಷ್ಟೇ. ಇದರ ಬಗ್ಗೆ ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಯವರು ಸಭೆಯನ್ನೂ ಕರೆದಿದ್ದರು. ಸಭೆ ಕರೆದು ಗ್ರಾಮಸ್ಥರಿಗೆ time ಕೊಡುವುದಕ್ಕೆ ದಯವಿಟ್ಟು ನಮಗೆ ಅವಕಾಶ ಮಾಡಿಕೊಡಿ, ನಮಗೆ 6 ತಿಂಗಳ ಸಮಯ ಕೊಡಿ, 6 ತಿಂಗಳ ಸಮಯ ಕೊಟ್ಟರೆ permanent ಆಗಿ ಮಂಡೂರಿಗೆ ಏನು ಕಸ ಕಳುಹಿಸುತ್ತಿದ್ದೇವೆ, ಅದನ್ನು ನಿಲ್ಲಿಸಿಬಿಡುತ್ತೇವೆಂದು ಮಾತು ಕೊಟ್ಟಿದ್ದಾರೆ. ಹಿಂದೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲೂ ಒಂದು ವರ್ಷ ಸಮಯ ಕೊಡಬೇಕೆಂದು ಕೇಳಿದ್ದರು. ಒಂದು ವರ್ಷ ಸಮಯ ಕೊಟ್ಟೆವು. ನಾನು ಗ್ರಾಮಸ್ಥರನ್ನು ಒಪ್ಪಿಸಿದೆ. ಈಗಲೂ ಕೂಡ ಗ್ರಾಮಸ್ಥರು ಒಪ್ಪಿದ್ದಾರೆ. ಆದರೆ, ಒಪ್ಪಿದ ನಂತರ ಮತ್ತೇನಾಗುತ್ತದೆಂದರೆ, ಜನರ ಪ್ರಶ್ನೆ ಕೇಳುತ್ತಿರುವುದೇನು? ಪ್ರತಿ ಸಲ BBMP ಯವರು, ಸರ್ಕಾರದವರು ಬರುತ್ತಾರೆ.

ಅಧ್ಯಕ್ಷರು:– Guarantee ಏನು?

ಶ್ರೀ ಅರವಿಂದ ಲಿಂಬಾವಳಿ:– Guarantee ಏನು? ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವುದೇನೆಂದರೆ, ಮಂಡೂರಿನಲ್ಲಂತೂ ಇನ್ನು ಮೇಲೆ ಕಸ ಹಾಕುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅಷ್ಟು ತುಂಬಿ ಹೋಗಿಬಿಟ್ಟಿದೆ. ಅಲ್ಲಿ ಬಿದ್ದಿರುವುದನ್ನು ತೆಗೆಯಬೇಕು. ತೆಗೆಯುವುದಕ್ಕಿಂತ ಮುಂಚೆ ನಿಲ್ಲಿಸಬೇಕಾದರೆ, ತೆಗೆಯಲಿಕ್ಕೇ 7–15 ವರ್ಷ ಬೇಕಾಗುತ್ತದೆ.

ಅಧ್ಯಕ್ಷರು:– ತೆಗೆಯಲಿಕ್ಕೆ?

ಶ್ರೀ ಅರವಿಂದ ಲಿಂಬಾವಳಿ:– ಬಿದ್ದಿರುವುದನ್ನು ತೆಗೆಯಲಿಕ್ಕೆ ಅಷ್ಟು ಸಮಯ ಬೇಕು. ಆ ಪ್ರಮಾಣದಲ್ಲಿದೆ. ಹಾಕುವುದು ಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ತೆಗೆಯಲಿಕ್ಕಾಗುವುದಿಲ್ಲ. Gas extraction ಮಾಡಬಹುದು ಎಂದು ಹೇಳುತ್ತಾರೆ. ಅದಕ್ಕೆ detail ಆಗಿ ಚರ್ಚೆ ಮಾಡಬೇಕು.

ಶ್ರೀ ಅರವಿಂದ ಲಿಂಬಾವಳಿ:– ಸರ್ಕಾರ ತಕ್ಷಣ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು:– ತಕ್ಷಣವೇ ಏನಾದರೂ ಇದ್ದರೆ ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಬೇರೆ ಕಡೆ ಜಾಗ ನೋಡಬೇಕಲ್ಲವೇ?

ಅಧ್ಯಕ್ಷರು:– ಹುಡುಕುತ್ತಾರೆ.

ಶ್ರೀ ಅರವಿಂದ ಲಿಂಬಾವಳಿ:– BBMP limits ಇದೆ. BBMP ಯವರಿಗೆ ಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಅದಕ್ಕೋಸ್ಕರ, ಬೇರೆ ಜಾಗವನ್ನು ನೀವು ಅವರಿಗೆ ಕೊಡದೇ ಇದ್ದರೆ ತೊಂದರೆ.

ಅಧ್ಯಕ್ಷರು:– ಸರ್ಕಾರವನ್ನು BBMP ಯವರು ಕೇಳಬೇಕಲ್ಲ?

ಶ್ರೀ ಅರವಿಂದ ಲಿಂಬಾವಳಿ:– ಜಾಗ ಕೊಡಿ ಎಂದು ಸರ್ಕಾರವನ್ನು ಕೇಳಿದ್ದಾರೆ. ಈಗ ಸರ್ಕಾರ, ಎಲ್ಲಿ ಜಾಗ ಕೊಟ್ಟಿದ್ದಾರೆಂದು ಉತ್ತರ ಹೇಳಬೇಕು. ಆ ವಿವರಗಳನ್ನು ಕೊಡುವುದೂ ಬೇಕಾಗಿಲ್ಲ. ಏಕೆಂದರೆ, ಕೊಟ್ಟರೆ ಬೇರೆ ತರಹ ಸಮಸ್ಯೆಯಾಗುತ್ತದೆ. ಅದರ ಬಗ್ಗೆ ಇಲ್ಲಿರುವಂಥ ಎಲ್ಲ ಹಿರಿಯ ಸದಸ್ಯರಿಗೂ ಗೊತ್ತಿದೆ. ಅದಕ್ಕೋಸ್ಕರ ಸರ್ಕಾರ ಜಾಗ ಕೊಡುವುದಕ್ಕೆ ಬದ್ಧವಾಗಿದೆಯೇ? ಬದ್ಧವಾಗಿ ಮತ್ತು ಅದಕ್ಕೆ process ಶುರು ಮಾಡಬೇಕು. ಮತ್ತೇ ಅಲ್ಲಿ ಹೋಗಿ dump ಮಾಡಿಬಿಟ್ಟರೆ ಅದೊಂದು land fill area ತರಹ ಆಗಿಬಿಟ್ಟರೆ ಆ ಗ್ರಾಮಸ್ಥರೂ ಗಲಾಟೆ ಮಾಡುತ್ತಾರೆ ಮತ್ತು ಅದು scientific ಅಲ್ಲ.

ಅಧ್ಯಕ್ಷರು:– ನಿಜ.

ಶ್ರೀ ಅರವಿಂದ ಲಿಂಬಾವಳಿ:– ಆ ಹಿನ್ನೆಲೆಯೊಳಗೆ ಹೊಸ ಜಾಗ ಕೊಡುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಎರಡನೆಯದಾಗಿ, ಈಗೇನು ಸುಮಾರು 20–25 ಸಾವಿರ ಟನ್ ಕಸ ಬಿದ್ದಿದೆ, ಅದನ್ನು process ಮಾಡುವುದಕ್ಕೆ, ಹಳೆಯ ಕಸವನ್ನು ಯಾರೂ ತೆಗೆಯುವುದಿಲ್ಲ. ಏನು ಮಾಡುತ್ತಾರೆಂದರೆ, ಬಹಳ ಸಮಸ್ಯೆ ಚರ್ಚೆಯಾಗುತ್ತಿರುವುದೇನೆಂದರೆ, ಅದನ್ನು capping ಮಾಡಿಬಿಡೋಣ, ಅದರ ಮೇಲೆ ಮಣ್ಣು ಹೊದಿಸಿ, garden

ಮಾಡಿಬಿಡೋಣ ಎನ್ನುತ್ತಾರೆ. ಇದರಿಂದ ಬರುವ ದಿನಗಳಲ್ಲಿ ದೊಡ್ಡ ಸಮಸ್ಯೆ ಅಲ್ಲಿ ವಾಸವಾಗಿರುವ ಜನರ ಮೇಲೆ ಆಗುವುದಿದೆ. ಆ ದೃಷ್ಟಿಯಿಂದ ಅದನ್ನು ತೆಗೆಯುವುದಕ್ಕೋಸ್ಕರ ಅಲ್ಲೇನು 20 ರಿಂದ 25 ಸಾವಿರ(ಲಕ್ಷ) ಟನ್ material ಬಿದ್ದಿದೆ, ಬೆಂಗಳೂರಿನಲ್ಲಿ ಅಲ್ಲೊಂದೇ ಕಡೆ ಅಲ್ಲ, 6 ಕಡೆ ಬಿದ್ದಿದೆ. ನನ್ನ ಕ್ಷೇತ್ರದ್ದೇ ಚಿನ್ನಸಂದ್ರದಲ್ಲಿದೆ, ಮಾವಳ್ಳಿಪುರದಲ್ಲಿದೆ, ಬೇರೆ ಬೇರೆ ಭಾಗಗಳಲ್ಲೇನು ಕಸ ಬಿದ್ದಿದೆ, ಅದನ್ನು ತೆಗೆದು ಹಾಕುವ ದೃಷ್ಟಿಯಿಂದ ಸರ್ಕಾರ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಎಲ್ಲೆಲ್ಲೋ ಬೇರೆ ಬೇರೆ ಕಡೆಗೆ ಅಲ್ಲ. ಅದರೊಳಗೆ gas ಏನಿದೆ ಆ gas ಆಗಲೇ ಕಡಿಮೆಯಾಗುತ್ತಾ ಬಂದಿದೆ. Fresh ಕಸಕ್ಕೂ, ಬಿದ್ದಿರುವ ಕಸಕ್ಕೂ ವ್ಯತ್ಯಾಸವಾಗುತ್ತದೆ. Gas extract ಮಾಡಬೇಕು.

ಅಧ್ಯಕ್ಷರು:– ಸಾಧ್ಯವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– Technically ತಿಳಿದುಕೊಂಡಿರುವವರು ಮಂಡೂರಿನಲ್ಲಿರುವ 25 ಲಕ್ಷ ಟನ್ ಗೊಬ್ಬರ ಏನಿದೆ, ಮುಂದಿನ 40 ವರ್ಷಗಳಿಗೆ gas extract ಮಾಡಲಿಕ್ಕೆ ಅವಕಾಶವಿದೆ ಎಂದು ಹೇಳುತ್ತಾರೆ.

ಅಧ್ಯಕ್ಷರು:– Good.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಸರ್ಕಾರದ ಮಟ್ಟದಲ್ಲಿ ಕುಳಿತುಕೊಂಡು ಇವೆಲ್ಲ ತೀರ್ಮಾನ ಮಾಡಬೇಕಾಗುತ್ತದೆ. ಕೆಲಸ ಮಾಡಲಿಕ್ಕೆ ಬಂದವರಿಗೆ encouragement ಕೊಟ್ಟು ಅಧಿಕಾರಿಗಳು ಉಪಯೋಗ ಮಾಡಿಕೊಳ್ಳುವುದಕ್ಕೆ ತಯಾರಾಗಿಲ್ಲ.

ಅಧ್ಯಕ್ಷರು:– Corporation ಗೆ ನೀವೂ ಸದಸ್ಯರಲ್ಲವೇ?

ಶ್ರೀ ಅರವಿಂದ ಲಿಂಬಾವಳಿ:– ನಾನು ಅಲ್ಲಿಯೂ ಸದಸ್ಯ, ಇಲ್ಲಿಯೂ ಸದಸ್ಯ. ಅದಕ್ಕೋಸ್ಕರ ಅಲ್ಲೇನೂ ಆಗದಿರುವುದಕ್ಕೆ at least ಇಲ್ಲಿಂದಾದರೂ ಆಗಬೇಕು ಎಂದು ಹೇಳುತ್ತೇನೆ. ಗ್ರಾಮೀಣ ಭಾಗದಲ್ಲೇನು ಕಸ ಬಿದ್ದಿದೆ, ಮಾನ್ಯ ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಆ

ದೃಷ್ಟಿಯಿಂದ ಆ ದಿಕ್ಕಿನಲ್ಲಿ ಹೋಗುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ಅಭಿನಂದಿಸುತ್ತೇನೆ. ಆದರೆ, ಜನರ ಪ್ರಶ್ನೆ ಏನೆಂದರೆ, 6 ತಿಂಗಳಾದನಂತರ ನೀವು ಬರುತ್ತೀರಾ? ಅದಕ್ಕೋಸ್ಕರ ಅದನ್ನು ನಿಲ್ಲಿಸಿ ಎಂಬುದು ನನ್ನ ಮೊದಲನೇ ಬೇಡಿಕೆ. 6 ತಿಂಗಳ ನಂತರ ಅಂದರೆ ಈಗಾಗಲೇ ಒಂದು ತಿಂಗಳಾಯಿತು.

ಅಧ್ಯಕ್ಷರು:– ಹೌದು.

ಶ್ರೀ ಅರವಿಂದ ಲಿಂಬಾವಳಿ:– ಇನ್ನು 5 ತಿಂಗಳು ಉಳಿದಿದೆ.

ಅಧ್ಯಕ್ಷರು:– ಐದೇ ತಿಂಗಳು ಉಳಿದಿದೆ.

ಶ್ರೀ ಅರವಿಂದ ಲಿಂಬಾವಳಿ:– 5 ತಿಂಗಳೊಳಗಾಗಿ ನೀವು ನಿಲ್ಲಿಸಬೇಕು. ಇಲ್ಲದಿದ್ದರೆ ಮತ್ತೆ ಏನು ಮಡುತ್ತಾರೆ? ಅವರ ಮೇಲೆ Section 144 ಹಾಕಿ, ಅವರನ್ನು ಜೈಲಿಗೆ ಕಳುಹಿಸಿ ಕಸ ಕಳುಹಿಸಿದರೆ? ಜನರ ಆರೋಗ್ಯವೂ ಹಾಳಾಗಿದೆ. ಕೇಸ್ ಅನ್ನೂ ಅನುಭವಿಸಬೇಕು. ಅಂಥ ಪರಿಸ್ಥಿತಿ ಇದೆ. ಅಲ್ಲಿ ಬಿದ್ದಿರುವ ಕಸ ತೆಗೆದುಯುವುದಕ್ಕೋಸ್ಕರ ಅನೇಕ ಕಂಪನಿಗಳು ಬಂದಿವೆ. ದಯವಿಟ್ಟು, ಸರ್ಕಾರ ಮನಸ್ಸು ಮಾಡಿದರೆ ಆಗುತ್ತದೆ. ಆ ಕಂಪನಿಗಳವರು presentation ಕೊಟ್ಟಿವೆ. ಅವರು ಯಾರಿಗೂ ಅವಕಾಶ ಕೊಡುತ್ತಿಲ್ಲ. ಏಕೆ ಕೊಡುತ್ತಿಲ್ಲವೆಂದರೆ, BBMP ಅಧಿಕಾರಿಗಳ ಮಟ್ಟದಲ್ಲಿ ದೊಡ್ಡ ಲಾಬಿಯೇ ಇದೆ. ರಾಜ್ಯ ಸರ್ಕಾರದ, ಅಧಿಕಾರ ಮಟ್ಟದಲ್ಲೂ ಇದೆ.

ಅಧ್ಯಕ್ಷರು:– Corporation?

ಶ್ರೀ ಅರವಿಂದ ಲಿಂಬಾವಳಿ:– ನಾನು ಹೇಳುತ್ತಿರುವುದು ರಾಜ್ಯ ಸರ್ಕಾರದ ಅಧಿಕಾರಿಗಳ ಬಗ್ಗೆ.

ಅಧ್ಯಕ್ಷರು:– ಅಧಿಕಾರಿಗಳೇನು ಸರ್ಕಾರ ಅಲ್ಲವೇ?

ಶ್ರೀ ಅರವಿಂದ ಲಿಂಬಾವಳಿ:– ಸರ್ಕಾರಕ್ಕೆ ಆ ರೀತಿಯ ಒಂದು will power ಇದ್ದರೆ ಮಾತ್ರ ಮಾಡಲಿಕ್ಕೆ ಸಾಧ್ಯ. ಆದರೆ, ಅದು ಈ ಸರ್ಕಾರಕ್ಕೆ ಇದೆ ಎಂದು ನಾನು ಭಾವಿಸುತ್ತೇನೆ. ಆ ದೃಷ್ಟಿಯಿಂದ ಬಿದ್ದಿರುವ ಕಸವನ್ನು

ತೆಗೆಯುವ ದೃಷ್ಟಿಯಿಂದ ಯೋಚಿಸಬೇಕು. ಮಾನ್ಯ ಅಧ್ಯಕ್ಷರೆ, ಅಲ್ಲಿ ಹೆಣ್ಣೂ ಕೋಡುವುದಿಲ್ಲ. ಅಂಥ ಪರಿಸ್ಥಿತಿ ಮಂಡೂರಿನಲ್ಲಿದೆ. ಲವ್ ಮಾಡುವುದಕ್ಕೂ ಯಾರೂ ಬರುವುದಿಲ್ಲ.

ಅಧ್ಯಕ್ಷರು:– ಎಲ್ಲಿ, Corporation ನಲ್ಲಾ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ರೈತರಿಗೆ ಅಂಥ ಪರಿಸ್ಥಿತಿ ಬಂದಿದೆ. ಏನು ಮಾಡುವುದು?

ಶ್ರೀ ಅರವಿಂದ ಲಿಂಬಾವಳಿ:– Permanent ಆಗಿ ಆಗಬೇಕಾದುದೇನೆಂದರೆ, ಅದು ನಿಲ್ಲಬೇಕು. ಕಸ ಕಳುಹಿಸುವುದು 5 ತಿಂಗಳಿನಿಂದ ನಿಲ್ಲಬೇಕು. ಬಿದ್ದಿರುವ ಕಸವನ್ನು ಎತ್ತಬೇಕು. ಇವು ಪ್ರಮುಖವಾದ ಎರಡು ಬೇಡಿಕೆಗಳು. ಅದು ಬಿಟ್ಟು, ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಆರೋಗ್ಯ ಹಾಳಾಗಿದೆ. ನಾನು ಆರೋಗ್ಯ ಸಚಿವನಿದ್ದಾಗ ಅಲ್ಲೊಂದು PHC ಕೊಟ್ಟೆ.

ಅಧ್ಯಕ್ಷರು:– ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ಟಿ.ಬಿ. ನಾಗರಾಜ್:– ಕಳೆದ ಸರ್ಕಾರದಲ್ಲಿ ಲಿಂಬಾವಳಿಯವರು 5 ವರ್ಷ ಅವರೇ ಶಾಸಕರಾಗಿ, ಸಚಿವರಾಗಿದ್ದರು. ಆ ಮಹದೇವಪುರ ಮತಕ್ಷೇತ್ರ ಇವರ ವ್ಯಾಪ್ತಿಗೇ ಬರುತ್ತದೆ.

ಅಧ್ಯಕ್ಷರು:– ಹೇಳಿದರು.

ಶ್ರೀ ಎಂ.ಟಿ.ಬಿ. ನಾಗರಾಜ್:– ಅಲ್ಲಿ local ಆಗಿ ಜನಪ್ರತಿನಿಧಿಗಳು, ಸಾರ್ವಜನಿಕರುಬ ಸಂಘ ಸಂಸ್ಥೆಗಳು ಪ್ರತಿಭಟನೆ ಮಾಡಿದಾಗ ಇವರು ಹಲವಾರು ಸಾರಿ ಬಂದು ಆಶ್ವಾಸನೆ ಕೊಟ್ಟಿದ್ದಾರೆ. 5 ತಿಂಗಳ ಸಮಯ ಕೊಡಿ, ಒಂದು ವರ್ಷ ಸಮಯ ಕೊಡಿ ಎಂದು 5 ವರ್ಷಗಳ ಕಾಲ ಹಿಂದಿನ ಸರ್ಕಾರದಲ್ಲಿ ಇವರು ಕಾಲಹರಣ ಮಾಡಿದ್ದಾರೆ. ಆ ಪ್ರತಿಭಟನೆಯಲ್ಲಿ 2–3 ಸಾರಿ ನಾನೂ ಕೂಡ ಭಾಗಿಯಾಗಿದ್ದೆ.

ಅಧ್ಯಕ್ಷರು:– ಆಯಿತು.

ಶ್ರೀ ಎಂ.ಟಿ.ಬಿ. ನಾಗರಾಜ್:– ಇವರು ಬಂದಾಗ 2–3 ಸಾರಿ ಅಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳವರು ಫೇರಾವ್ ಕೂಡ ಮಾಡಿದ್ದಾರೆ. ಇವೆಲ್ಲ ಕೂಡ ಗೊತ್ತಿದೆ. ಆದರೂ ಕೂಡ 5 ವರ್ಷಗಳ ಕಾಲ ಹಿಂದಿನ ಸರ್ಕಾರ ಮಾಡಲಿಲ್ಲ.

ಅಧ್ಯಕ್ಷರು:– ಈಗೇನು ಮಾಡಬೇಕೆಂದು ಹೇಳಿ.

ಶ್ರೀ ಎಂ.ಟಿ.ಬಿ. ನಾಗರಾಜ್:– ಈಗಲಾದರೂ ಇಂದಿನ ಸರ್ಕಾರಗಳು ಮಾಡಲಿಕ್ಕೆ ಪ್ರಯತ್ನಪಡಲಿ ಎಂದು ಹೇಳುತ್ತೇನೆ. ಇವತ್ತು ಅಲ್ಲಿ ಬಹಳ ಸಮಸ್ಯೆ ಎದುರಿಸುತ್ತಿದ್ದೇವೆ.

ಅಧ್ಯಕ್ಷರು: ಆಯಿತು.

ಶ್ರೀ ಎಂ.ಟಿ.ಬಿ. ನಾಗರಾಜ್:– ಅಲ್ಲಿ ಬರುವ ಸುಮಾರು 5–6 ಗ್ರಾಮಗಳವರಿಗೆ ವಾಸ ಮಾಡಲಿಕ್ಕೆ ಕಷ್ಟವಿದೆ.

ಅಧ್ಯಕ್ಷರು:– ಆಯಿತು.

ಶ್ರೀ ಎಂ.ಟಿ.ಬಿ. ನಾಗರಾಜ್:– ಹಿಂದೆ ಇವರೇ 5–6 ಬಾರಿ ಆಶ್ವಾಸನೆ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ನಾನು ರಾಜಕಾರಣ ಮಾತನಾಡುವುದಕ್ಕೆ ಬಂದಿಲ್ಲ. ರಾಜಕಾರಣ ಮಾಡಬೇಕಾದರೆ ನಾನೂ ಚೆನ್ನಾಗಿ ಮಾತನಾಡುತ್ತೇನೆ. 5 ವರ್ಷವೋ, ಎಷ್ಟು ವರ್ಷವೋ? ಆ ಪತ್ರ ಯಾವತ್ತು ಕೊಟ್ಟಿದ್ದೆವು? ಯಾವತ್ತಿಗೆ date ಮುಗಿಯುತ್ತದೆ, ಮಾನ್ಯ ಮುಖ್ಯಮಂತ್ರಿಯವರ ಜೊತೆ, ಆ ಗ್ರಾಮಸ್ಥರ ಜೊತೆ ಮಾತನಾಡಿರುವುದು ಅವೆಲ್ಲ ಬೇಡ. ನಾಗರಾಜುರವರೆ, ಆ ರಾಜಕಾರಣದ ಬಗ್ಗೆ ಮಾತನಾಡು ಎಂದರೆ ನಾನೂ ಮಾತನಾಡುತ್ತೇನೆ. ಬೇಡ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಆದರೆ, ತಾತ್ಕಾಲಿಕವಾದ ಕೆಲವು ಬೇಡಿಕೆಗಳನ್ನು ಗ್ರಾಮಸ್ಥರು ಇಟ್ಟಿದ್ದಾರೆ.

ಅಧ್ಯಕ್ಷರು:– ಹೌದು.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಕುಮಾರಸ್ವಾಮಿಯವರು ಮಾತನಾಡುವ ಸಂದರ್ಭದಲ್ಲಿ ಇವೆಲ್ಲ ಹೇಳಿಯೇ ಹೇಳುತ್ತಾರೆ.

ಅಧ್ಯಕ್ಷರು:– ಖಂಡಿತ.

ಶ್ರೀ ಅರವಿಂದ ಲಿಂಬಾವಳಿ:– ಆದರೆ, ತಕ್ಷಣ ಗಮನಿಸಬೇಕಾದುದು, ನಾನು ಆರೋಗ್ಯ ಕೇಂದ್ರ ಕೊಟ್ಟಿದ್ದೆ, ಅಲ್ಲಿ ಕಟ್ಟಡಕ್ಕೆ ಅನುದಾನ ಕೊಟ್ಟಿಲ್ಲ. ನಿಲ್ಲಿಸಿಬಿಟ್ಟಿದ್ದಾರೆ. ಮಂಡೂರಿನಲ್ಲಿಯೇ ಆಸ್ಪತ್ರೆ ಕಟ್ಟುವುದಕ್ಕೆ ಕೊಟ್ಟಿರುವ ಹಣವನ್ನೂ ಹಿಂದಕ್ಕೆ ತೆಗೆದುಕೊಂಡರೆ ಅವರ ಆರೋಗ್ಯವನ್ನು ಕಾಪಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಹೇಗೆ ಸಾಧ್ಯವಿದೆ? ದಯವಿಟ್ಟು ತಕ್ಷಣ ಹಣ ಬಿಡುಗಡೆ ಮಾಡಬೇಕು. ಅದರ ಪಕ್ಕದಲ್ಲಿ ಆವಲಹಳ್ಳಿ ಎನ್ನುವ ಗ್ರಾಮ ಇದೆ.

ಅಧ್ಯಕ್ಷರು:– ಬಾಡಿಗೆ ಕಟ್ಟಡವಿದ್ದರೆ ತಕ್ಷಣ ಆಸ್ಪತ್ರೆ ಶುರು ಮಾಡಿಸಿ.

ಶ್ರೀ ಅರವಿಂದ ಲಿಂಬಾವಳಿ:– ನಡೆಸುತ್ತಿದ್ದೇವೆ. ಕಟ್ಟುವುದಕ್ಕೋಸ್ಕರ ಅರ್ಧ ಕಟ್ಟಡವಾಗಿನಿಂತಿದೆ. ಆರೋಗ್ಯ ಇಲಾಖೆಯವರು ಅದನ್ನು release ಮಾಡಲಿ. ಮಾನ್ಯ ಮುಖ್ಯಮಂತ್ರಿಯವರು ಆ ರೀತಿಯ ನಿರ್ದೇಶನ ಕೊಟ್ಟರೆ ಮಾತ್ರ ಅದನ್ನು ಮಾಡಲಿಕ್ಕೆ ಸಾಧ್ಯವಿದೆ. ಎರಡನೆಯದಾಗಿ, ಕುಡಿಯುವ ನೀರು contaminate ಆಗಿದೆ. ಮೊನ್ನೆಯವರೆಗೂ ಏನಾಗುತ್ತಿತ್ತು ಎಂದರೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವತಿಯಿಂದ ನಾವು ವ್ಯವಸ್ಥೆ ಮಾಡಿದ್ದೆವು. ಮೊನ್ನೆ ರಾಜ್ಯ ಸರ್ಕಾರ ಇದನ್ನು ನಾವು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕೊಡುತ್ತೇವೆಂದು ತೀರ್ಮಾನ ಮಾಡಿದೆ. ಅವರದ್ದೂ ಇಲ್ಲ, ಇವರದ್ದೂ ಇಲ್ಲ. ಅಲ್ಲಿ ಕುಡಿಯುವುದಕ್ಕೆ ನೀರೇ ಇಲ್ಲ. ಅಲ್ಲಿರುವ ನೀರು contaminate ಆಗಿದೆ. ದನಕರುಗಳಿಗೂ ನೀರಿಲ್ಲ ಮನುಷ್ಯರಿಗೂ ನೀರಿಲ್ಲ. ದಯವಿಟ್ಟು, ರಾಜ್ಯ ಸರ್ಕಾರ ತಕ್ಷಣ ಕುಡಿಯುವ ನೀರಿನ ವ್ಯವಸ್ಥೆಯನ್ನು ಅಲ್ಲಿರುವ ಗ್ರಾಮಸ್ಥರಿಗೆ ಮಾಡಬೇಕು. ಮಾನ್ಯ ಅಧ್ಯಕ್ಷರೆ, ಸಂಜೆ 6 ಗಂಟೆ ಆದಮೇಲೆ ಎಲ್ಲರೂ

ಬಾಗಿಲು ಹಾಕಿಕೊಳ್ಳಬೇಕಾಗುತ್ತದೆ. ಏಕೆಂದರೆ, ಸೊಳ್ಳೆಗಳು ಒಳಗೆ ಬರುತ್ತವೆ, ಆ ಪ್ರಮಾಣದಲ್ಲಿ ಸೊಳ್ಳೆಗಳು, ನೊಣಗಳಿವೆ.

ಅಧ್ಯಕ್ಷರು:– ನಿಜ.

ಶ್ರೀ ಅರವಿಂದ ಲಿಂಬಾವಳಿ:– ಅದಕ್ಕೋಸ್ಕರ 24X7 current ಕೊಡಿ ಎಂದು ಕೂಡ ಕೇಳಿದ್ದೆವು. ಇವತ್ತಿನವರೆಗೂ ಅದೂ ಕೂಡ ಆಗಿಲ್ಲ. ಇವೆಲ್ಲ ತಾತ್ಕಾಲಿಕ ಬೇಡಿಕೆ. ಜನರು ಅನುಭವಿಸುತ್ತಿರುವುದಕ್ಕೆ ತಾತ್ಕಾಲಿಕ ಬೇಡಿಕೆಗಳನ್ನೂ ಕೂಡ ಸರ್ಕಾರದಿಂದ ಈಡೇರಿಸುವುದಕ್ಕೆ ಆಗುವುದಿಲ್ಲವೆಂದಾದರೆ, ಈ ಸಣ್ಣಪುಟ್ಟ ಸಮಸ್ಯೆಗಳನ್ನೂ ಬಗೆಹರಿಸಲಿಕ್ಕೆ ಆಗುವುದಿಲ್ಲವೆನ್ನುವುದಾದರೆ ಜನರು ಹೇಗೆ co-operate ಮಾಡುವುದಕ್ಕೆ ಸಾಧ್ಯ? ನಾನು ಆಗಲೇ ಪ್ರಸ್ತಾಪ ಮಾಡಿದ ಹಾಗೆ ಸುತ್ತೂ ಕಡೆಯಿಂದ ಲಾರಿಗಳು ಬರುತ್ತಿವೆ. ನಮ್ಮ ರಸ್ತೆಗಳೆಲ್ಲ ಗ್ರಾಮೀಣ ರಸ್ತೆಗಳಾಗಿದ್ದು ಅದು ಯಾವ ಮಟ್ಟದ quality ಇರುತ್ತದೆ ತಮಗೆಲ್ಲಾಗೊತ್ತಿದೆ. Load-bearing capacity ಆ ಗ್ರಾಮೀಣ ರಸ್ತೆಗಳಿಗೆ ಬಹಳ ಕಡಿಮೆ ಇರುತ್ತದೆ. ಎಲ್ಲಾ ರಸ್ತೆಗಳು ಹಾಳಾಗಿ ಹೋಗಿವೆ. ಅದಕ್ಕೋಸ್ಕರ ಆ ರಸ್ತೆಗಳನ್ನಾದರೂ ರಿಪೇರಿ ಮಾಡಿಸಿ. ಜನರು ಓಡಾಡುವುದಕ್ಕೆ ಕಷ್ಟವಾಗಿದೆ. ಎಲ್ಲಾ ದಿಕ್ಕಿನಿಂದಲೂ ಲಾರಿಗಳು ಬಂದು ನುಗ್ಗುತ್ತಿವೆ ಮತ್ತು ಅನೇಕ contractorಗಳು, local ಜನರ ಹೆಸರಿನಲ್ಲಿಯೂ ಬಂದು ಕಸ ಹಾಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆ ದೃಷ್ಟಿಯಿಂದ ಅಲ್ಲಿರುವ ರಸ್ತೆಗಳನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ನಿವೇದಿಸಿಕೊಳ್ಳುತ್ತೇನೆ. ಬಹಳ ದುಃಖವಾಗಿದೆ. ಈ ಎರಡು ಬೇಡಿಕೆಗಳೇನಿವೆ ಅದನ್ನು ಗ್ರಾಮಸ್ಥರು ಕೇಳುತ್ತಿದ್ದಾರೆ, ನನ್ನದೂ ಕೂಡ ಅದೇ ಒತ್ತಾಯ, ಎಲ್ಲರದ್ದೂ ಕೂಡ ಅದೇ ಒತ್ತಾಯ. ಇನ್ನೂ 5 ತಿಂಗಳಿಗೆ ಯಾವುದೇ ಕಾರಣಕ್ಕೂ ಅಲ್ಲಿಗೆ ಕಸ ತಲುಪಿಸಿ ಹಾಕಲಿಕ್ಕೆ ಸಾಧ್ಯವೇ ಇಲ್ಲ.

ಅಧ್ಯಕ್ಷರು:– ಹೇಳಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ:– ಅದಕ್ಕೋಸ್ಕರ ಇವರು ಹೊಸ ಜಾಗ ನೋಡದಿದ್ದರೆ ಪುನಃ 5 ತಿಂಗಳು ಮುಂದಕ್ಕೆ ಹೋಗುತ್ತದೆ. ನಾವು ಜಾಗ

ನೋಡುತ್ತಿದ್ದೇವಪ್ಪ, ಅಲ್ಲಿ ಹುಡುಕಿದ್ದೇವೆ, ಇಲ್ಲಿ ಹುಡುಕಿದ್ದೇವೆ, ನಮಗೆ ಇನ್ನೂ ಜಾಗ ಸಿಕ್ಕಿಲ್ಲ, ನಮಗೆ ಇನ್ನೂ 2 ತಿಂಗಳು, 3 ತಿಂಗಳು ಕಾಲಾವಕಾಶ ಕೊಡಿ ಎಂದು ಬರುತ್ತದೆ. ಆ ಸಂದರ್ಭದಲ್ಲಿ ಸರ್ಕಾರಕ್ಕೂ ಬಹಳ ದೊಡ್ಡ ಸಮಸ್ಯೆ ಆಗುತ್ತದೆ, ಬೆಂಗಳೂರಿನ ಜನರಿಗೂ ಸಮಸ್ಯೆ ಆಗುತ್ತದೆ. ಇದರ ಮಧ್ಯ ನಾನೇನೂ ಸುಮ್ಮನೆ ಕುಳಿತಿರಲಿಲ್ಲ. ಮಾನ್ಯ ಎಂ.ಟಿ. ನಾಗರಾಜ್‌ರವರ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ. ಪ್ರತಿಭಟನೆ ಮಾಡಿ ನನಗೆ ಯಾರೂ ಫೇರಾವ್ ಹಾಕಿಲ್ಲ. ಫೇರಾವ್ ಹಾಕುವ ಆ ಮಟ್ಟಕ್ಕೆ ನಾನು ಹೋಗಿಲ್ಲ. ಜನರ ಹೋರಾಟದ ಜೊತೆಗೆ ನಾನಿದ್ದೇನೆ. ಆ ಸಂದರ್ಭದಲ್ಲಿ ಈ ಮಧ್ಯೆ 6 ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರವೂ ನಾನು ಸಭೆ ಮಾಡಿದ್ದೇನೆ. ಇನ್ನು 6 ತಿಂಗಳಿಗೆ ಮುಗಿದುಹೋಗುತ್ತದೆ ಸರ್, ದಯವಿಟ್ಟು ಇದರ ಕಡೆಗೆ ಗಮನಹರಿಸಿ ಎಂದು ಹೇಳಿದಾಗ, ಅವರು ತಕ್ಷಣ ಅಧಿಕಾರಿಗಳಿಗೆ ಸೂಚನೆ ಕೊಟ್ಟರು. ಅಧಿಕಾರಿಗಳು ಅದರಲ್ಲಿ ನಿಧಾನಗತಿ ತೋರಿಸಿದ್ದರಿಂದ ಮತ್ತೆ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೊತೆಗೂ ನಾನು 3 ಸಭೆಗಳನ್ನು ಈ ನಿಮಿತ್ತವಾಗಿ ಮಾಡಿದ್ದೇನೆ. ಅಲ್ಲೂ ಕೂಡ ಈ ಕೆಲಸಗಳು ಮುಂದೆ ಹೋಗುವುದಿಲ್ಲ. ಆ ದೃಷ್ಟಿಯಿಂದ ಸರ್ಕಾರ ಇದಕ್ಕೆ alternative ಜಾಗ ಹುಡುಕಿ process ಮಾಡುವಂಥ ಕಂಪನಿಗಳಿಗೆ ಅವಕಾಶ ಕೊಡದೇ ಇದ್ದರೆ ಬೆಂಗಳೂರು ಒಂದೇ ಅಲ್ಲ, ಬರುವಂಥ ದಿನಗಳಲ್ಲಿ ಮೈಸೂರಿನಲ್ಲೂ ಈ ಸಮಸ್ಯೆ ಆರಂಭವಾಗುತ್ತದೆ, ತುಮಕೂರಿನಲ್ಲಿಯೂ ಈ ಸಮಸ್ಯೆ ಆರಂಭವಾಗುತ್ತದೆ.

ಅಧ್ಯಕ್ಷರು:– ಎಲ್ಲಾ ಕಡೆ ಇದೆ. ನಮ್ಮ ಊರಿನಲ್ಲಿಯೂ ಈ ಸಮಸ್ಯೆ ಇದೆ.

ಶ್ರೀ ಅರವಿಂದ ಲಿಂಬಾವಳಿ:– ಮಂಗಳೂರಿನಲ್ಲಿ ಪ್ರಾರಂಭವಾಗುತ್ತದೆ, ಹುಬ್ಬಳ್ಳಿಯಲ್ಲೂ ಪ್ರಾರಂಭವಾಗುತ್ತದೆ, ಗುಲ್ಬರ್ಗಾದಲ್ಲೂ ಆರಂಭವಾಗುತ್ತದೆ, ಹೀಗೆ ಎಲ್ಲಾ ಮಹಾನಗರಗಳಲ್ಲಿ ಈ ಸಮಸ್ಯೆಯನ್ನು ಎದುರಿಸುವಂಥ ಪರಿಸ್ಥಿತಿ ಬರುತ್ತದೆ. ಮತ್ತು ಇಡೀ ದೇಶದಲ್ಲಿಯೇ ಯಾವ್ಯಾವ ರಾಜ್ಯದಲ್ಲಿ ಯಾವ್ಯಾವ

ರೀತಿ process ನಡೆಯುತ್ತಿದೆ, at least ಅಂಥ ರಾಜ್ಯಗಳಲ್ಲಿ ಏನು ನಡೆಯುತ್ತಿದೆ ಎಂದಾದರೂ ಅರ್ಥಮಾಡಿಕೊಂಡು ಈ ಕೆಲಸವನ್ನು ಸರ್ಕಾರ ಕೈಗೆತ್ತಿಕೊಂಡರೆ ಒಳ್ಳೆಯದು. ಮಂಡೂರಿನ ಜನ ಇಡೀ ಬೆಂಗಳೂರಿನ ಕಸವನ್ನು ಹೊತ್ತುಕೊಳ್ಳುತ್ತಿದ್ದಾರೆ. ಪ್ರತಿ ದಿನ 2000 ಟನ್ ಕಸ ಅಲ್ಲಿಗೆ ಹೋಗುತ್ತಿದೆ. ಅಂಥ ಪರಿಸ್ಥಿತಿ ಅಲ್ಲಿದೆ. ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಈ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಡಾ॥ ಸಿ.ಎನ್. ಅಶ್ವತ್ ನಾರಾಯಣ (ಮಲ್ಲೇಶ್ವರಂ):– ಮಾನ್ಯ ಅಧ್ಯಕ್ಷರೆ, ಕಸ ವಿಲೇವಾರಿಯಲ್ಲಿ ಮೂರು ಭಾಗ ಇದೆ. ಒಂದನೆಯದು, ಸ್ವಚ್ಛತೆ ಮಾಡುವಂಥದ್ದು, ಎರಡನೆಯದು, transportation ಮಾಡುವಂಥದ್ದು, ಮೂರನೆಯದು, ಈ ಕಸ ವಿಲೇವಾರಿ ಮಾಡುವಂಥದ್ದು. ಈ ಮೂರು ಭಾಗದಲ್ಲೂ ಪರಿಣಾಮಕಾರಿಯಾಗಿ ಕೆಲಸ ನಡೆಯುತ್ತಿಲ್ಲ. ಮುಖ್ಯವಾಗಿ ಮೂರನೇ ಭಾಗದ ಬಗ್ಗೆ ನಾವು ಮಾತನಾಡುವಂಥದ್ದು ಇದೆ. 3ನೇ ಭಾಗ ಯಾವ ರೀತಿಯಾಗಿ ವಿಲೇವಾರಿ ಮಾಡಬೇಕು? ಈಗ ಇರುವುದು ನಮ್ಮ land fill concept. ಆ land fill ನಲ್ಲೂ ಮೂರು ತರಹ ಇದೆ. Sanitary land fill ಎಂದು ಇರುವಂಥದ್ದು ಮತ್ತು ಇನ್ನೆರಡು ಇದೆ. ಈಗ ನಾವು ಮಾಡುತ್ತಿರುವುದು Sanitary land fill. ಈ sanitary land fill ಮಾಡಿರುವಂಥದ್ದು ಕಾನೂನಿನಲ್ಲಿ ಯಾವ ರೀತಿ ಮಾಡಬೇಕಿತ್ತು, scientific ಆಗಿ ಯಾವ ರೀತಿ ಮಾಡಬೇಕಾಗಿತ್ತು, ನಮ್ಮ ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಅದು gas ಆಗಲಿ, Leachates ಆಗಲಿ, ಅಥವಾ ಕಸದ ಬಗ್ಗೆ ಆಗಲಿ, segregation ಆಗಲಿ, ಇದು ಯಾವುದೂ ಸಹ ಆ land fill ನಲ್ಲಿ ಏನು ಇವರಿಗೆ tipping charges ಕೊಡುತ್ತಿದ್ದರೋ, ಈ tipping charges ಕೊಡುತ್ತಿದ್ದುದ್ದನ್ನು scientific ಆಗಿ dispose ಮಾಡಬೇಕೆಂದು ಇವರಿಗೆಲ್ಲ ಕೊಟ್ಟರು. ಕೊಟ್ಟಿದ್ದನ್ನು ಯಾವ ರೀತಿ ದುರುಪಯೋಗ ಮಾಡಿಕೊಂಡರು ಎಂದು ಮಾನ್ಯ ಅರವಿಂದ ಲಿಂಬಾವಳಿಯವರು ವಿವರವಾಗಿ ಹೇಳಿದರು. ಕೊಟ್ಟಿದ್ದಂಥ ಜವಾಬ್ದಾರಿಯನ್ನು ಏನು ಒಂದು ಉದ್ದೇಶ ಇತ್ತೋ, scientific ಆಗಿ ಮಾಡಬೇಕಾಗಿತ್ತೋ, ಇದಕ್ಕೆ ಕಾರಣಕರ್ತರಾದಂಥ ಆ contractor

ಆಗಲಿ, ಅಧಿಕಾರಿಗಳನ್ನಾಗಲಿ ಇವರ ಮೇಲೆ ಯಾವುದೇ ಕ್ರಮಗಳನ್ನು ಜರುಗಿಸಿಲ್ಲ. ಎಲ್ಲರೂ ಹೀಗೆ ಮಾಡುತ್ತಲೇ ಬಂದಿದ್ದಾರೆ. ಏನು ಮಾಡಿದರೂ ನಡೆಯಬಹುದು ಎನ್ನುವ ಉದ್ದೇಶದಲ್ಲಿ, ಮನೋಭಾವನೆಯಲ್ಲಿ ನಡೆಯುತ್ತಾ ಬಂದಿದೆ. ಇವತ್ತಿನ ಈ ಕಾಲದಲ್ಲಿ ಆಧುನಿಕ methods ನಲ್ಲಿ ಹೊಸದಾಗಿ ಬಂದಿರುವಂಥದ್ದು incineration ಎಂದು ಇದೆ ಮತ್ತು bio–methanization ಇದೆ.

ಅಧ್ಯಕ್ಷರು:– Bio-methanization ಈಗಾಗಲೇ ಯಾರಾದರೂ ಮಾಡಿದ್ದಾರೆಯೇ?

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ಇದೆ, ಮಾಡಿದ್ದಾರೆ.

ಅಧ್ಯಕ್ಷರು:– ಎಲ್ಲಿ?

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ಎಲ್ಲಾ ದೇಶಗಳಲ್ಲಿ ಮಾಡಿದ್ದಾರೆ.

ಅಧ್ಯಕ್ಷರು:– ಬೇರೆ ದೇಶ ಬೇಡಿ, ನಮ್ಮ ದೇಶದಲ್ಲಿ ನಮ್ಮ ರಾಜ್ಯದಲ್ಲಿ ಮಾಡಿದ್ದಾರೆಯೇ, ಮಾಡಿದ್ದರೆ, ಅದನ್ನು ಹೇಳಿ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ನಮ್ಮ ರಾಜ್ಯದ ಬಗ್ಗೆಯೇ ನಾನು ಮಾತನಾಡುತಿದ್ದೇನೆ. ನಮ್ಮ ರಾಜ್ಯದಲ್ಲೂ ಈಗ ಏನು method ಹೇಳುತ್ತಿದ್ದೇವೆಯೋ ಆ incineration method ಈಗ ಎಲ್ಲ ಆಸ್ಪತ್ರೆಗಳಲ್ಲಿ ಇದೆ. ಸಣ್ಣ ಸಣ್ಣ ಮಟ್ಟದಲ್ಲಿ ಎಲ್ಲಾ ಕಡೆ ಇದೆ. Bio-methanization ಕೂಡ ಮಾಡಿದ್ದಾರೆ. ಎಲ್ಲ ಸಣ್ಣ ಸಣ್ಣ ಮಟ್ಟದಲ್ಲಿವೆ, ಚಿಕ್ಕಚಿಕ್ಕದಾಗಿವೆ. ದೊಡ್ಡ ಮಟ್ಟದಲ್ಲಿ ಮಾಡಿದಾಗ policy ಏನು? ಇವರು case to case handle ಮಾಡುತ್ತಿದ್ದಾರೆ. ಈವಾಗ ಭೀಮಪ್ಪ ಬಂದ, ರಾಮಪ್ಪ ಬಂದ, ಆಂಜನೇಯ ಬಂದ. ಆಂಜನೇಯನಿಗೆ ಒಂದು ಕಾನೂನು, ಭೀಮಪ್ಪನಿಗೆ ಒಂದು ಕಾನೂನು, ಎಲ್ಲರಿಗೂ ಒಂದೊಂದು ಕಾನೂನು. ಈಗ ಇರುವಂಥ methodಗಳೇನು? Incineration ಮಾಡಬೇಕು, ಆಯಿತು, ನಮ್ಮಲ್ಲಿ mixed waste ಬರುತ್ತದೆ, ನಾವು segregate ಮಾಡಿಲ್ಲ, segregate ಮಾಡದೇ

composting ಮಾಡುವುದಕ್ಕಾಗುವುದಿಲ್ಲ. ಈ ಕಾರಣದಿಂದ ನಾವು mixed waste ಬಂದಿದ್ದನ್ನು ಯಾವ ರೀತಿ dispose ಮಾಡಬೇಕು? Segregate ಆಗಿ ಬಂದಿದ್ದನ್ನು ಯಾವ ರೀತಿ dispose ಮಾಡಬೇಕು? Segregate ಆಗಿ ಬಂದಿದ್ದನ್ನು composting ಮಾಡಬೇಕು. Composting ಮಾಡಿದ ಗೊಬ್ಬರವನ್ನು ಕೊಂಡುಕೊಳ್ಳುವವರು ಯಾರು? ಸರ್ಕಾರ ಅದಕ್ಕೆ method ಮಾಡಿಲ್ಲ. Compost ಮಾಡುತ್ತೇವೆ, compost ಮಾಡಿದ್ದನ್ನು ಕೊಂಡುಕೊಳ್ಳುವವರು ಯಾರು? ಈ ರೀತಿ ಯಾವುದನ್ನೂ ಕೂಡ ಸರ್ಕಾರದಲ್ಲಿ ಸರಿಯಾದ ರೀತಿಯಲ್ಲಿ ಯಾವುದೇ ಆಲೋಚನೆ ಮಾಡದಿರುವುದು ಕಂಡುಬರುತ್ತಿದೆ.

ಅಧ್ಯಕ್ಷರು:– Corporation ಇದೆ, ಅದಕ್ಕೆಲ್ಲ ನೀವು member ಅಲ್ಲವೇ?

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ನಾನು member, ಅದಕ್ಕೆ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ಇವತ್ತು ವ್ಯವಸ್ಥೆ ಕೆಟ್ಟುಹೋಗಿ ಅಧಿಕಾರ ಪಡೆದವರು ಯಾರು? ನಮ್ಮ ಸರ್ಕಾರ ಆಗಲಿ, ಇನ್ನೊಂದು ಸರ್ಕಾರ ಆಗಲಿ, ಕಾಂಗ್ರೆಸ್ ಸರ್ಕಾರ ಆಗಲಿ, ಬಿಜೆಪಿ ಸರ್ಕಾರ ಆಗಲಿ, ಯಾರು ಜವಾಬ್ದಾರಿ ತೆಗೆದುಕೊಂಡಾಗ ಯಾವ ರೀತಿ ನಾವು ಪರಿಹಾರ ಕೊಡಬೇಕು? ಇವತ್ತೂ ಪರಿಹಾರ ಕೊಡಬೇಕೇ ಬೇಡವೇ?

ಅಧ್ಯಕ್ಷರು:– ಅದು corporation ನ ಕೆಲಸ ಅಲ್ಲವೇ?

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ಇವತ್ತು Corporation policy ಮಾಡುವ ಹಾಗಿದ್ದರೆ ಇವತ್ತು ಆ ಮಟ್ಟದಲ್ಲಿ Corporation ಗೆ ಎಷ್ಟು ಅಧಿಕಾರವನ್ನು ನಾವು ಕೊಟ್ಟಿದ್ದೇವೆ? ಮೇಯರ್‌ರವರಿಗೆ ಏನು ಅಧಿಕಾರವಿದೆ? ಆ Commissioner ಅನ್ನು ಯಾರು post ಮಾಡುವುದು ಸರ್? ಆ Commissioner ಆಗಿ ಬಂದಿರುವವರಿಗೆ ಈ ನಗರದ ಬಗ್ಗೆ ಪೂರ್ತಿ ಜ್ಞಾನ ಇದೆಯೋ ಇಲ್ಲವೋ? ಯಾವ ಒಂದು propertyಯ validation ಮಾಡುವುದಿಲ್ಲ. ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು

ಕೆಂಪೇಗೌಡ ಜಯಂತಿಗೆಂದು ಬಂದಾಗ Corporation ನಲ್ಲಿರುವ ಅಧಿಕಾರಿಗಳಿಗೆ, Corporation ನ ಚುನಾಯಿತ ಪ್ರತಿನಿಧಿಗಳಿಗೆ ಬೆಂಗಳೂರಿನಲ್ಲಿ, tax collection ಸರಿಯಾಗಿ ಆಗುತ್ತಿಲ್ಲ ಎಂದು ಹೇಳುತ್ತಿದ್ದರು.

ಅಧ್ಯಕ್ಷರು:– ಆ ಚರ್ಚೆ ಬೇಡ. ಕಸ ವಿಲೇವಾರಿ ಬಗ್ಗೆ ಹೇಳಿ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ:– ಏನು ಮಾಡುತ್ತಿದ್ದೀರಿ ಎಂದು ತಾವು ಕೇಳಿದಿರಲ್ಲಾ ಅದಕ್ಕೆ ನಾನು ಹೇಳಿದೆ. ಅವರ ಉದ್ದೇಶವನ್ನು ನಾನು ಹೇಳಬೇಕೆಂದರೆ, ಬೆಂಗಳೂರು ನಗರವನ್ನು ಇಡೀ ದೇಶದಲ್ಲಿಯೇ ಮುಂಚೂಣಿಗೆ ತೆಗೆದುಕೊಂಡು ಹೋಗಬಹುದು. Tax collectionನಲ್ಲಾಗಲಿ, ಖರ್ಚು ಮಾಡುವುದರಲ್ಲಾಗಲಿ ಎರಡರಲ್ಲೂ ಪಾರದರ್ಶಕತೆ ತರಲಿಕ್ಕೆ ಸಾಧ್ಯವಾಗಿದೆ. ಇವತ್ತು ನಾನು ಕೇಳುತ್ತಿರುವುದು ಇಷ್ಟೇ. ಈ ಕಸ ವಿಲೇವಾರಿಯಲ್ಲಿ ಒಂದು incineration method ಇದೆ. ಇನ್ನೊಂದು, composting ಇದೆ, ಮತ್ತೊಂದು bio-methanization ಇದೆ. ಸರ್ಕಾರ policy ತರಲಿ. ಒಬ್ಬೊಬ್ಬರಿಗೆ tipping charges ಕೊಡುತ್ತಾರೆ, ಇನ್ನೊಬ್ಬರಿಗೆ tipping charges ಕೊಡುವುದಿಲ್ಲ, ಒಬ್ಬನಿಗೆ land ಕೊಡುತ್ತಾರೆ, ಇನ್ನೊಬ್ಬನಿಗೆ land ಕೊಡುವುದಿಲ್ಲ, ಇನ್ನೊಬ್ಬನಿಗೆ collateral ಕೊಡುತ್ತಾರೆ, ಇನ್ನೊಬ್ಬನಿಗೆ initial capital fund ಕೊಡುತ್ತಾರೆ, ಈ ತಾರತಮ್ಯ ಏತಕ್ಕೆ? Policy ಈ ರೀತಿ ಇದೆ, ಈ ರೀತಿ ಮಾಡಿಕೊಂಡು ಹೋಗುತ್ತೇವೆ, ನಾವು segregate ಆದ waste ಅನ್ನು composting ಮಾಡಿದ ಮೇಲೆ marketing ಹೇಗೆ ಮಾಡಬೇಕು? ಇದು ಯಾವುದರ ಬಗ್ಗೆಯೂ ಆಲೋಚನೆ ಇಲ್ಲದೇ ಪರಿಹಾರ ಬೇಕು ಎಂದರೆ ಯಾವ ದಿಕ್ಕಿನಲ್ಲಿ ಪರಿಹಾರ ಸಿಗುತ್ತದೆ? ಈ ಪರಿಸರ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಯಾರಿಗೋ ಹೊರಿಸಿಬಿಟ್ಟು ಹೋಗುವುದಕ್ಕೆ ಸಾಧ್ಯವಿಲ್ಲ. ನೇರ ವಿಷಯದ ಬಗ್ಗೆ ಹೇಳುತ್ತಿದ್ದೇನೆ. ಮೂರು methods ಇರುವುದು. ಈ methods ಗೆ ಏನಾದರೂ ಆಲೋಚನೆ ಸರ್ಕಾರದವರು ಮಾಡಿದ್ದಾರೆಯೇ? ಯಾವುದಾದರೂ ಒಂದು ದಾರಿಯಲ್ಲಿ ತೆಗೆದುಕೊಂಡು ಹೋಗಬೇಕು. Incineration ಅಥವಾ bio-methanization ಅಥವಾ composting. Bio-methanization ಮಾಡುವವನು

ಕೇಳುತ್ತಾನೆ. kitchen waste ಬೇಕೆಂದು ಕೇಳುತ್ತಾನೆ. ಇನ್ನೊಂದು ಕಡೆ composting ಮಾಡಿದವರು segregated waste ಬೇಕೆಂದು ಕೇಳುತ್ತಾರೆ. Segregation ಸರಿಯಾಗಿ ಆಗದೇ ಇವು ಯಾವ method ಸಹ click ಆಗುವುದಿಲ್ಲ. Ultimately ಇರುವುದು ಒಂದೇ, ಅದು incineration. Incineration ಮಾಡುವ policy ಗೆ ಸ್ಪಷ್ಟವಾದ ನೀತಿ ಏನು ಹಾಕಿಕೊಳ್ಳಬೇಕು? ಯಾವುದೇ industryಯನ್ನು ಯಾರೇ set up ಮಾಡಿ, ನಮ್ಮಲ್ಲಿ ಇರುವಂಥ capacity ಎಷ್ಟು? 2000 ಟನ್ನೋ, 3000 ಟನ್ನೋ, 4000 ಟನ್ನೋ? ಇಷ್ಟು ಟನ್‌ಗೆ ನಾವು ಮಾಡಲಿಕ್ಕೆ ಸಾಧ್ಯವಿದೆ? Land ಕೊಡಲಿಕ್ಕೆ ತಯಾರಿದ್ದೇವೆಯೇ? ಅಥವಾ ನಿಮ್ಮದೇ ಲ್ಯಾಂಡಾ? ಆ unit ನಿಂದ power generate ಆದರೆ ಅದಕ್ಕೆ ಏನು ರೇಟ್ ಕೊಡುತ್ತೇವೆ? ಇಷ್ಟೂ scientific ಆಗಿ fix ಆದರೆ ನಮ್ಮ power generation ಗೆ ಎಷ್ಟು ಬರುತ್ತದೆ? Tipping Charges ಎಷ್ಟು ಕೊಡುತ್ತೇವೆ? ಮತ್ತು land ಇವುಗಳ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವು ತೆಗೆದುಕೊಂಡರೆ ಇದ್ಯಾವುದೂ ಗೊಂದಲವಿರುವುದಿಲ್ಲ. ಏನಿವತ್ತು ಸರ್ಕಾರ ಮನಸ್ಸು ಮಾಡಿದರೆ ಆ ಕಾಲದಲ್ಲಿಯೇ ಪರಿಹಾರ ಕೊಡಲಿಕ್ಕೆ ಸಾಧ್ಯವಿದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೆ, ಇವತ್ತು last extension ಮಂಡೂರುರವರು ಕೊಟ್ಟಿರುವಂಥದ್ದು. ಮಂಡೂರಿನಲ್ಲಿ ಆಗಿದ್ದ ಪರಿಸ್ಥಿತಿಯೇ ಮಾವಳ್ಳಿ ಪುರದಲ್ಲಿ ಆಗಿದ್ದಿರಬಹುದು, ಅದೇ ಪರಿಸ್ಥಿತಿ ಟೆರ್ರಾ ಫಾರಂನಲ್ಲೂ ಆಗಿರಬಹುದು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮೊದಲನೆಯದಾಗಿ ಒಳ್ಳೆಯ ಕೆಲಸ ಮಾಡಿದ್ದೀರಿ. ಒಬ್ಬ ಅಧಿಕಾರಿಯನ್ನು ಅದಕ್ಕೋಸ್ಕರ ನೇಮಿಸಿ BBMP ಗೆ ಕಳುಹಿಸಿರುವುದು ಮೊದಲನೇ ದೊಡ್ಡ ಹೆಜ್ಜೆ ಇದಾಗಿದೆ. ಅದನ್ನು ಜ್ಞಾಪಕ ಇಟ್ಟುಕೊಂಡು ಅದನ್ನೇ ಮುಂದುವರಿಸಿ. 5 ತಿಂಗಳ ಕೊನೆಯವರೆಗೂ ನಾವು ಕಾಯದೇ 3 ಕೆಲಸಗಳನ್ನು ಮಾಡಬೇಕು. ಈಗಾಗಲೇ ಅಶ್ವತ್ಥನಾರಾಯಣರವರು, ಅರವಿಂದ್‌ರವರು ಹೇಳಿದ್ದಾರೆ. ಮೊದಲನೆಯದು, segregationಗೆ ಹೆಚ್ಚು ಒತ್ತು ಕೊಟ್ಟು ಆ ward level

ನಲ್ಲಿಯೇ segregation ಆಗಬೇಕು. ಎರಡನೇಯದಾಗಿ, end product ಆಗಿ ನಾವು ಯಾವ ರೀತಿ ಮಾಡಬೇಕೆಂದು ಕೂಡಲೇ ನಿಶ್ಚಯ ಮಾಡಬೇಕು. Incineration, Bio-methonization ಯಾವುದನ್ನಾದರೂ ಮಾಡಬೇಕು. ನಾವು ಹಿಂದೆ ಸೇಲಂನಿಂದ ಒಂದು plant ತಂದು ಹಾಕಬೇಕೆಂದು ಅವರಿಗೆ land ಅನ್ನು ಕೊಡುವ ಕೆಲಸವನ್ನೂ ಸಹ ಮಾಡಿದೆವು. ಆದರೆ ಅವರು ಮಾಡಿಲ್ಲ. ನಾವೆಲ್ಲರೂ producers. ಶ್ರೀ ಅರವಿಂದ ಲಿಂಬಾವಳಿಯವರು receiving endನಲ್ಲಿದ್ದಾರೆ. ನಾವು ಕಸ ಹೋದರೆ ಸಾಕು ಎಂಬ ಪರಿಸ್ಥಿತಿಯಲ್ಲಿರುತ್ತೇವೆ. ಅದಕ್ಕೋಸ್ಕರ ಇದಕ್ಕೆ ಹೆಚ್ಚು ಒತ್ತು ಕೊಡಬೇಕು. ಕಸದ segregation ಮತ್ತು ಕೊನೆಯಲ್ಲಿ ಅದನ್ನು ಯಾವ ರೀತಿ ವಿಲೇವಾರಿ ಮಾಡಬೇಕೆಂದು ಸರ್ಕಾರ ಈಗಲಿಂದಲೇ, without wasting any time, ನಿಶ್ಚಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಈಗ ನನಗೊಂದು ಆಲೋಚನೆ ಇದೆ.

ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ್ (ಅಫ್ಜಲ್‌ಪೂರ):– ಮಾನ್ಯ ಅಧ್ಯಕ್ಷರೆ, ಇದು ಕೇವಲ ಬೆಂಗಳೂರಿನ ಸಮಸ್ಯೆ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿರುವಂಥ ಎಲ್ಲಾ ಮಹಾನಗರ ಪಾಲಿಕೆಗಳಲ್ಲೂ ಇದೇ ಸಮಸ್ಯೆಯಾಗಿದೆ. ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು.

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಇದು ನಮ್ಮ ಊರಿನಲ್ಲೂ ಪ್ರಾರಂಭವಾಗಿದೆ. ನಾನು 18 ಎಕರೆ ಜಾಗವನ್ನು land fill ಗಾಗಿ compound ಹಾಕಿ ಕೊಟ್ಟಿದ್ದೆ, ಅವರು ಮಾಡಿಬಿಟ್ಟರು. ನಾನು ಎರಡು ವರ್ಷಗಳ ನಂತರ ಮೊನ್ನೆ ಅದನ್ನು ನೋಡಲು ಹೋದಾಗ ಅದು ಗುಡ್ಡವಾಗಿ ಬೆಳೆದಿತ್ತು. ಕೊನೆಗೆ ನಾನು ಗಲಾಟೆ ಮಾಡಿ ಎಲ್ಲವನ್ನೂ ಮುಚ್ಚಿಸಿ ಬಂದಿದ್ದೇನೆ. ಈಗ ಮುಂದೇನು ಮಾಡಬೇಕೆಂದು ನಾನೂ ಸಹ ನಿಮ್ಮನೇ ಕೇಳಬೇಕೆಂದಿದ್ದೆ. ಕೆಲವೊಂದು ಕಡೆ ಮಾಡಿದ್ದಾರೆ, ಅದನ್ನು ನೋಡಿ ಬರೋಣ ಎಂದು ಮಾಡಿದ್ದೆ. ಇದಕ್ಕೊಂದು ಶಾಶ್ವತ ಪರಿಹಾರವನ್ನು ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ ತಾವು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂಥ

ಶಾಸಕರನ್ನು ಕರೆದು ಮೂಲತಃ ಚರ್ಚೆ ಮಾಡಿ ಪರಿಹಾರ ಕಂಡುಹಿಡಿದರೆ, ಬೇರೆಯವರಿಗೂ ಅನುಕೂಲವಾಗುತ್ತದೆ.

ಶ್ರೀ ಕೆ. ಶಿವಮೂರ್ತಿ:– ಪರಿಹಾರವೆಂದಲ್ಲ, ಇದು ನೀತಿ ಪ್ರಶ್ನೆಯಾಗುತ್ತದೆ. ನಮ್ಮಲ್ಲೂ ಸಹ ಡಾಬಾಗಳು ಬಂದು ಕಸವನ್ನೆಲ್ಲ ಬೀದಿಗೆ ಹಾಕುತ್ತಿದ್ದಾರೆ. ವಾಸನೆ ಬಂದು ಅಲ್ಲಿ ಜನ ಓಡಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ರಾಜ್ಯಾದ್ಯಂತ ಇದಕ್ಕೊಂದು ನೀತಿ ಮಾಡಬೇಕು.

ಅಧ್ಯಕ್ಷರು:– ವಿಶ್ವನಾಥ್‌ರವರೆ, ತಾವು ಮಾತನಾಡಿ. (ಗೊಂದಲ) ನೀವ್ಯಾರೂ ಬರೆದು ಕೊಟ್ಟಿಲ್ಲ. ಬರೆದು ಕೊಟ್ಟವರು ಅವರು.

ಶ್ರೀ ಎಸ್.ಆರ್. ವಿಶ್ವನಾಥ್ (ಯಲಹಂಕ):– ಮಾನ್ಯ ಅಧ್ಯಕ್ಷರೆ, ಯಲಹಂಕ ಕ್ಷೇತ್ರದ ಮಾವಳ್ಳಿಪುರದಲ್ಲಿ ಈಗ ನಿಲ್ಲಿಸಿದ್ದಾರೆ. ಆದರೆ 35 ಲಕ್ಷ ಟನ್ ಗೊಬ್ಬರ ಅಲ್ಲಿ ಸ್ಟಾಕ್ ಇದೆ. ಅಲ್ಲಿದ್ದಾಗ ಆಸ್ಪತ್ರೆ, ಕುಡಿಯುವ ನೀರಿನ ಸೌಲಭ್ಯವನ್ನೆಲ್ಲಾ ಕೊಡುತ್ತಿದ್ದರು. ಯಾವಾಗ ಅದನ್ನು ಮುಚ್ಚಿದರೋ ಆಗಲೇ ಅದನ್ನು ಮರೆತರು. ಕಸವನ್ನು ಹೇಗೆ dispose ಮಾಡಬೇಕು ಎನ್ನುವುದನ್ನು ನೋಡುತ್ತಿಲ್ಲ. ಬೆಂಗಳೂರಿನಲ್ಲಿ ಕಸದ ಸಮಸ್ಯೆ ಬಹಳ ದೊಡ್ಡದೇನಲ್ಲ. ಇದರ ಹಿಂದೆ ಇರತಕ್ಕಂಥ ಲಾಬಿ ಮತ್ತು ಹಿತಾಸಕ್ತಿ ಇದೆಯಲ್ಲ, ಅದೇ ದೊಡ್ಡ ಸಮಸ್ಯೆಯಾಗಿರತಕ್ಕಂಥದ್ದು. 198 ವಾರ್ಡ್‌ಗಳಿವೆ. ಅವುಗಳನ್ನು delimitation ಮಾಡಿ, ಚಿಕ್ಕಚಿಕ್ಕದಾಗಿ ಮಾಡಿ ಬೆಂಗಳೂರಿನ ಎಂಟೂ ಕಡೆಗಳಲ್ಲಿ 20–25 ಎಕರೆಯಂತೆ ಸಣ್ಣ ಜಾಗ ತೆಗೆದುಕೊಳ್ಳಲಿ. ಜವಾಬ್ದಾರಿಯನ್ನು ನಮಗೇ ಕೊಡಲಿ. ಈ ಕ್ಷೇತ್ರದ ಶಾಸಕರು ನೀವು, ಈ ವಲಯ ಇದೆ, ನೀವು ಜವಾಬ್ದಾರಿ ತೆಗೆದುಕೊಳ್ಳಿ ಎಂದು ಹೇಳಲಿ. ಸಣ್ಣದಾದ ಯೂನಿಟ್ ಗಳನ್ನು ಹಾಕಿಕೊಂಡು ಚಿಕ್ಕ ಚಿಕ್ಕದಾಗಿ ನಾವು ಕಸ dispose ಮಾಡಿದರೆ ಬಹಳ ದೊಡ್ಡ ಸಮಸ್ಯೆಯೇನಲ್ಲ. ಈಗ ನಾವೇನು ಮಾಡುತ್ತೇವೆಂದರೆ ಎಲ್ಲ ಕಸವನ್ನು ಮಂಡೂರಿಗೆ ಅಥವಾ ಟೆರ್ರಾ ಫಾರಂಗೆ ತೆಗೆದುಕೊಂಡು ಹೋಗುತ್ತೇವೆ. ನಾವು ಒಂದೇ ಕಡೆ ಕಸವನ್ನು ಬಿಸಾಕುತ್ತಿದ್ದೇವೆ. ಇಲ್ಲೇನಾಗಿದೆ ಎಂದರೆ central cityಯಲ್ಲಿ ಜಾಗವಿಲ್ಲ. ಬೆಂಗಳೂರು ಮಧ್ಯದಿಂದ ಕಸವನ್ನು ಹೊರವಲಯಕ್ಕೆ

ತರಬೇಕಾಗುತ್ತದೆ. ಎಂಟು ವಲಯಗಳಿಗೆ, ಸನ್ಮಾನ್ಯ ಮುಖ್ಯಮಂತ್ರಿಗಳು ಸಣ್ಣ ಜಾಗ ನೋಡಿ ಎಂಟು ವಲಯಗಳನ್ನಾಗಿ divide ಮಾಡಬೇಕು. Scientific ಆಗಿ ಮೂಲದಲ್ಲಿಯೇ ಕಸವನ್ನು ಬೇರ್ಪಡಿಸಬೇಕು. ಯಲಹಂಕದಲ್ಲಿ ಜನ ಬಹಳ ಒಳ್ಳೆಯವರು. ಕಸ ವಿಂಗಡಿಸಿ ಕೊಡುತ್ತಿದ್ದರು. ಯಾರೋ ಒಬ್ಬರು 50% ಕಡಿಮೆ ರೇಟ್‌ಗೆ ಟೆಂಡರ್ ಹಾಕಿಕೊಂಡ, ಲೇಬರ್ ಮತ್ತು ವೆಹಿಕಲ್‌ಗಳನ್ನು ಕಡಿಮೆ ಮಾಡಿ ವಾರಕ್ಕೊಮ್ಮೆ collectionಗೆ ಹೋಗುತ್ತಾನೆ. ಜನ ಏನು ಮಾಡಿದರು? ಮತ್ತೆ ಕಸ ಎಸೆಯಲು ಶುರು ಮಾಡಿದರು. ಮೂಲದಲ್ಲಿಯೇ ಕಸ ವಿಂಗಡಿಸಿಕೊಂಡು ಮಾಡಿದರೆ ಬಹಳ ದೊಡ್ಡ ಸಮಸ್ಯೆಯೇನಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಮ್ಮೆ ಕುಳಿತುಕೊಂಡು ಚರ್ಚೆ ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಬಹುದು. ನಾವು ಯಾವುದೇ ಲಾಬಿಗೆ ಮಣಿಯಬಾರದು.

ಶ್ರೀ ಕೆ. ಶಿವಮೂರ್ತಿ:– ಕೇವಲ ಬೆಂಗಳೂರಿನದ್ದಲ್ಲ, ಇಡೀ ರಾಜ್ಯದ ಸಮಸ್ಯೆ ಇದು.

ಅಧ್ಯಕ್ಷರು:– ಈಗ ಬಹಳ ಜನ ಇದರ ಬಗ್ಗೆ ತಮ್ಮ ಅಭಿಪ್ರಾಯ ಕೊಡಬೇಕೆಂದಿದ್ದಾರೆ. ನಾನೊಂದು ಮಾತನ್ನು ಹೇಳುತ್ತೇನೆ, ಕೇಳಿ. Short time ನಲ್ಲಿ ಇದನ್ನು dispose ಮಾಡುವುದು ಕಷ್ಟವಾಗುತ್ತದೆ. ಬಹಳ ಜನ ಮಾತನಾಡಬೇಕೆಂದಿದ್ದಾರೆ. Call Attention Noticeಗಳು ಬೇರೆ ಇವೆ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಕಸ ವಿಲೇವಾರಿ ಬಗ್ಗೆ ಈಗಾಗಲೇ ಮಾನ್ಯ ಕುಮಾರಸ್ವಾಮಿಯವರೂ ಸಹ ಹೇಳಿದ್ದಾರೆ. ಇಲಾಖೆಯ ಮೇಲೆ ಚರ್ಚೆ ಇದೆ. ಆಗ detailed ಆಗಿ ಉತ್ತರ ಕೋಡೋಣ. Hotchpotch ಆಗಿ ಏಕೆ ಇದನ್ನು ಮಾಡುವುದು? Detail ಆಗಿ ಇಲಾಖೆಯ ಮೇಲೆ ಚರ್ಚೆ ಮಾಡಿ ನಂತರ ಉತ್ತರ ಕೊಡುವಾಗ ಮಾಡೋಣ.

ಅಧ್ಯಕ್ಷರು:– ಜಾಸ್ತಿ ಜನರಿಗೆ ಸಮಯ ಜಾಸ್ತಿ ಕೊಟ್ಟು ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಹಾಗೇ ಮಾಡೋಣ.

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:- ಈಗ ಎರಡು ನಿಮಿಷ time ಕೊಟ್ಟರೆ ಸಾಕು, ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು:- ಈಗ ಎರಡು ನಿಮಿಷ, ಒಂದು ನಿಮಿಷದಲ್ಲಿ ಏನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ಎರಡು ನಿಮಿಷ, ಒಂದು ನಿಮಿಷದಲ್ಲಿ ಏನು ಮಾತನಾಡುತ್ತೀರಿ? ಇಲಾಖೆಯ ಮೇಲೆ ಎಲ್ಲರೂ 10–15 ನಿಮಿಷ ಮಾತನಾಡಿ.

ಅಧ್ಯಕ್ಷರು:- ಏನೂ ಆಗುವುದಿಲ್ಲ. ದಯವಿಟ್ಟು ದೀರ್ಘವಾಗಿ ಚರ್ಚೆ ಮಾಡಿ. ಆನಂತರ ಅವರು ಒಂದು ಪರಿಹಾರವನ್ನು ಸೂಚಿಸುತ್ತಾರೆ.

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:- ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು request ಇದೆ. ಎಲ್ಲ ಸದಸ್ಯರು ಇನ್ನೊಂದು ಜಾಗ ಹುಡುಕಿ ಎಂದು ಹೇಳಿದ್ದಾರೆ. ಅದು ಇನ್ನೊಂದು dumping yard ಆಗುವುದು ಬೇಡ, treatment, processing plantಗಳು ಆಗುವಂಥ ಜಾಗಗಳನ್ನು ಹುಡುಕಬೇಕು.

ಅಧ್ಯಕ್ಷರು:- ಆಯಿತು, ಇಲಾಖೆಗೆ ಸಲಹೆ ಕೊಡಿ.

ಶ್ರೀ ಸಿದ್ದರಾಮಯ್ಯ:- Department ಮೇಲೆ ಮಾತನಾಡುವಾಗ ತಮಗೇನೇನು ಹೊಳೆಯುತ್ತದೆ ಅದರಂತೆ ಸಲಹೆ ಕೊಡಿ. ನೀವು ಶಾಸಕರೆಲ್ಲಾ Corporationನಲ್ಲಿದ್ದೀರಿ. ನೀವೂ ಸಹ ಸಭೆಗೆ ಹೋಗುತ್ತೀರಿ. ಅಲ್ಲಿ ಈ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ ಎಂದುಕೊಂಡಿದ್ದೇನೆ. ನಿಮಗೆ ಸಮಸ್ಯೆಗಳು ಗೊತ್ತು. ನೀವು Urban Development Department ನ demands ಬಗ್ಗೆ ಚರ್ಚೆ ಮಾಡುವಾಗ ಈ ಕಸ ವಿಲೇವಾರಿ ಬಗ್ಗೆಯೇ ವಿಶೇಷವಾಗಿ ಮಾತನಾಡಿ, ಏನೇನು ಮಾಡಬೇಕೆಂದು ಸಲಹೆಗಳನ್ನು ಕೊಡಿ. ನಾವೇನು ಮಾಡಿದ್ದೇವೆ ಎಂಬುದನ್ನೂ ಹೇಳುತ್ತೇವೆ. ಇನ್ನೇನು ಮಾಡಬೇಕೆನ್ನುವುದನ್ನೂ ಹೇಳಿ. ಅದನ್ನೆಲ್ಲಾ ಮಾಡೋಣ.

ಅಧ್ಯಕ್ಷರು:– ಇದೊಂದು ದೊಡ್ಡ ಪ್ರಶ್ನೆ. ಒಂದು ಪರಿಹಾರವನ್ನು ಕಂಡು ಹಿಡಿಯುವುದು ಒಳ್ಳೆಯದು.

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ:– ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು:– ನಮ್ಮಲ್ಲೇ ಈ ಸಮಸ್ಯೆ ಬಂದಿದೆ ಎಂದು ನಾನೇ ಹೇಳುತ್ತಿದ್ದೇನಲ್ಲ? ಈಗ ಶ್ರೀ ಹೆಚ್.ಕೆ. ಕುಮಾರಸ್ವಾಮಿಯವರೇ, ಕೇಳಿ.

9. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಆನೆ ಕಾರಿಡಾರ್ ಸ್ಥಾಪನೆ ಮತ್ತು ಬೆಳೆಪರಿಹಾರ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ಆನೆಕಾರಿಡಾರ್ ಸ್ಥಾಪನೆ ಮತ್ತು ಬೆಳೆಪರಿಹಾರ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಉಚ್ಚ ನ್ಯಾಯಾಲಯವು ರಚಿಸಿರುವ ಆನೆ ಕಾರ್ಯಪಡೆಯು ಸಲ್ಲಿಸಿರುವ ವರದಿಯಲ್ಲಿ ಆನೆ ಕಾರಿಡಾರ್ ಸ್ಥಾಪನೆ ಬಗ್ಗೆ ಶಿಫಾರಸ್ಸು ಮಾಡಿರುವುದಿಲ್ಲ. ಸದರಿ ವರದಿಯನ್ನು ರಾಜ್ಯ ಸಚಿವ ಸಂಪುಟವು ಆನೆ ಕಾರ್ಯಪಡೆಯ ವರದಿಯನ್ನು ಒಪ್ಪಿ, ನ್ಯಾಯಾಲಯಕ್ಕೆ ಸಲ್ಲಿಸಿದೆ. ರಿಟ್ ಅರ್ಜಿ ಸಂಖ್ಯೆ: 14029/2008ರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 08.10.2013ರಂದು ನೀಡಿದ ಅಂತಿಮ ತೀರ್ಪಿನಲ್ಲಿ ಸರ್ಕಾರದ ನಿಲುವನ್ನು ಅಂಗೀಕರಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಆನೆ ಕಾರಿಡಾರ್ ಸ್ಥಾಪನೆ ವಿಚಾರ ಸರ್ಕಾರದ ಮುಂದೆ ಇರುವುದಿಲ್ಲ.